# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜನವರಿ 02, 2021

ಸಂಪುಟ : 47 ಸಂಚಿಕೆ : 243 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 3.00 www.janathavani.com janathavani@mac.com


## ಶಾಲೆಗಳಲ್ಲಿ ಮರುಕಳಿಸಿದ ಹುರುಪು

### 6-9 ನೇ ತರಗತಿಗೆ ವಿದ್ಯಾಗಮ, 10-12ನೇ ತರಗತಿ ಆರಂಭ, ಖುಷಿಯಿಂದಲೇ ಬಂದ ಮಕ್ಕಳು







ಬಹುದಿನಗಳ ನಂತರ ಶಾಲೆಗೆ ಆಗಮಿಸುತ್ತಿರುವ ವಿದ್ಯಾರ್ಥಿಗಳು, ಶಾಲೆಗಳಲ್ಲಿ ಥರ್ಮಲ್ ಸ್ಕ್ಯಾನಿಂಗ್ ಟೆಸ್ಟ್ ನಡೆಸಿ, ಕೈಗಳಿಗೆ ಸ್ಯಾನಿಟೈಸರ್ ಹಾಕಿ ಒಳ ಬಿಡುತ್ತಿರುವುದು .



ದೈಹಿಕ ಅಂತರ ಕಾಪಾಡಿಕೊಂಡು ತರಗತಿಯಲ್ಲಿ ಕುಳಿತಿರುವ ವಿದ್ಯಾರ್ಥಿಗಳು

ದಾವಣಗೆರೆ, ಜ.1- ತಳಿರು ತೋರಣಗಳಿಂದ ಸಿಂಗಾರಗೊಂಡ ಶಾಲೆಗಳು, ಹೊಸ ಹುರುಪಿನೊಂದಿಗೆ ಆಗಮಿಸಿದ್ದ ಮಕ್ಕಳು, ಮಕ್ಕಳನ್ನು ಕಂಡು ಸಂತಸಗೊಂಡ ಶಿಕ್ಷಕರು, ಹತ್ತು ತಿಂಗಳಿನಿಂದ ಬಿಕೋ ಎನ್ನುತ್ತಿದ್ದ ಶಾಲೆಗಳಲ್ಲಿ ಹೊಸ ಕಳೆ, ಸಾಮಾಜಿಕ ಅಂತರದೊಂದಿಗೆ ತರಗತಿಗಳ ಆರಂಭ.

ನಗರ ಶಾಲೆಗಳಲ್ಲಿ ಕಂಡು ಬಂದ ವಾತಾವರಣವಿದು. ಬೇಕು-ಬೇಡಗಳ ಚರ್ಚೆಯ ನಡುವೆಯೇ ಸರ್ಕಾರ ಇಂದಿನಿಂದ ಶಾಲಾ ಆರಂಭಕ್ಕೆ ಹಸಿರು ನಿಶಾನೆ ನೀಡಿದ್ದರ ಹಿನ್ನೆಲೆಯಲ್ಲಿ ಕೋವಿಡ್ ಮಾರ್ಗಸೂಚಿ ಅನ್ವಯ ಶಾಲೆಗಳು ಆರಂಭವಾಗಿವೆ.

ಶಾಲಾರಂಭಕ್ಕೆ ನಗರದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಆರಂಭದ ದಿನವಾದ ಶುಕ್ರವಾರ ಖಾಸಗಿ ಶಾಲೆಗಳಿಗೆ ಹೋಲಿಸಿದರೆ, ಸರ್ಕಾರಿ ಶಾಲೆಗಳಲ್ಲಿಯೇ ಮಕ್ಕಳ ಹಾಜರಾತಿ ಹೆಚ್ಚಾಗಿತ್ತು.

ನಗರದ ಮೋತಿ ವೀರಪ್ಪ ಸರ್ಕಾರಿ ಪ್ರೌಢಶಾಲೆ ಹಾಗೂ ಕಾಲೇಜಿನಲ್ಲಿ ಶಾರದಾ ಪೂಜೆಯೊಂದಿಗೆ ತರಗತಿಗಳನ್ನು ಆರಂಭಿಸಲಾಯಿತು. ತಳಿರು ತೋರಣಗಳಿಂದ ಸಿಂಗರಿಸಿದ್ದ ಶಾಲೆಯಲ್ಲಿ ಚಾಕೋಲೇಟ್, ಗುಲಾಬಿ ಹೂ ನೀಡಿ ಮಕ್ಕಳನ್ನು ಸ್ವಾಗತಿಸಲಾಯಿತು.

ನಿಟುವಳ್ಳಿಯ ಸರ್ಕಾರಿ ಶಾಲೆಯೂ ಮಕ್ಕಳ ಆಗಮನದ ಹಿನ್ನೆಲೆಯಲ್ಲಿ ಸಿಂಗಾರಗೊಂಡಿತ್ತು. ಮಕ್ಕಳು, ಶಿಕ್ಷಕರಲ್ಲಿ ಹೊಸ ಹುರುಪು, ಸಂತಸ ಮನೆ ಮಾಡಿತ್ತು. ಶಾಲಾ ಆವರಣದಲ್ಲಿನ ಮರದಡಿ 6 ರಿಂದ 9ನೇ ತರಗತಿ ಮಕ್ಕಳಿಗೆ ವಿದ್ಯಾಗಮ ತರಗತಿಗಳು ನಡೆದವು. ಶಾಲೆ ಒಳಗಡೆ ಹತ್ತನೇ ತರಗತಿಗಳು ನಡೆದವು. (2ನೇ ಪುಟಕ್ಕೆ)

### ನಿಮ್ಮ ಮಕ್ಕಳ ಜವಾಬ್ದಾರಿ ನಮ್ಮದು, ಧೈರ್ಯವಾಗಿ ಶಾಲೆಗೆ ಕಳುಹಿಸಿ: ಡಿಸಿ

ದಾವಣಗೆರೆ, ಜ.1- ನಿಮ್ಮ ಮಕ್ಕಳ ಆರೋಗ್ಯ ಕಾಪಾಡಿಕೊಂಡು ವಿದ್ಯಾದಾನ ಮಾಡುವ ಜವಾಬ್ದಾರಿ ನಮ್ಮದು, ಧೈರ್ಯವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡಿ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಪೋಷಕರಿಗೆ ಕರೆ ನೀಡಿದರು.

ನಿಟುವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಭೇಟಿ ನೀಡಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎಲ್ಲಾ ಶಾಲೆಗಳಲ್ಲೂ ಸ್ಯಾನಿಟೈಸರ್, ದೈಹಿಕ ಅಂತರ ಕಾಪಾಡಿಕೊಂಡು ತರಗತಿಗಳನ್ನು ನಡೆಸಲಾಗುತ್ತದೆ. ಮಕ್ಕಳಿಗೆ ಏನೂ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು ಎಂದರು.

ರಾಜ್ಯ ಸರ್ಕಾರದ ಆದೇಶದಂತೆ 6 ರಿಂದ 9ನೇ ತರಗತಿ ಮಕ್ಕಳಿಗೆ ವಿದ್ಯಾಗಮವನ್ನು ಶಾಲಾ ಆವರಣದಲ್ಲಿಯೇ ಆರಂಭಿಸಲಾಗುತ್ತಿದೆ. ಮಾರ್ಗಸೂಚಿ ಅನುಸರಿಸಿ, ದೈಹಿಕ ಅಂತರದೊಂದಿಗೆ 10 ಹಾಗೂ 12ನೇ ತರಗತಿ (4ನೇ ಪುಟಕ್ಕೆ)

## ಆಕ್ಸ್‌ಫರ್ಡ್ ಲಸಿಕೆಗೆ ಕೇಂದ್ರ ಸಮಿತಿ ಒಪ್ಪಿಗೆ

ನವದೆಹಲಿ, ಜ.1 – ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ರೂಪಿಸಿರುವ ಕೋವಿಶೀಲ್ಡ್ ಲಸಿಕೆಯ ತುರ್ತು ಬಳಕೆಗೆ ಕೇಂದ್ರ ಸರ್ಕಾರ ರೂಪಿಸಿರುವ ವಿಷಯ ಪರಿಣಿತರ ಸಮಿತಿ (ಎಸ್.ಇ.ಸಿ.) ಒಪ್ಪಿಗೆ ನೀಡಿದೆ. ಭಾರತದ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಲಸಿಕೆಯನ್ನು ಉತ್ಪಾದಿಸುತ್ತಿದೆ.

ಕೆಲ ಷರತ್ತುಗಳೊಂದಿಗೆ ಲಸಿಕೆಯ ಬಳಕೆಗೆ ಎಸ್.ಇ.ಸಿ. ಅನುಮತಿ ನೀಡಿದೆ. ಆನಂತರದಲ್ಲಿ ಭಾರತೀಯ ಔಷಧ ನಿಯಂತ್ರಕರು ಒಪ್ಪಿಗೆ ನೀಡಬೇಕಿದೆ.

ಈ ಪ್ರಕ್ರಿಯೆಗಳನ್ನು ಪೂರೈಸಿದ ನಂತರ 7-10 ದಿನಗಳಲ್ಲೇ ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಬ್ರಿಟನ್‌ನ ಔಷಧ ನಿಯಂತ್ರಕ ಮೆಡಿಸಿನ್ಸ್ ಅಂಡ್ ಹೆಲ್ತ್ ಪ್ರಾಡಕ್ಟ್ಸ್ ರೆಗ್ಯುಲೇಟರಿ ಅಥಾರಿಟಿ (ಎಂ.ಹೆಚ್.




ಆರ್.ಎ.) ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಹಾಗೂ ಅಸ್ಟ್ರಾಜೆನೆಕಾ ರೂಪಿಸಿರುವ ಲಸಿಕೆಯ ತುರ್ತು ಬಳಕೆಗೆ ಕಳೆದ ಡಿಸೆಂಬರ್ 30ರಂದು ಒಪ್ಪಿಗೆ ನೀಡಿತ್ತು.

ಸೆರಮ್ ಇಂಡಿಯಾ ಈಗಾಗಲೇ 50 ದಶಲಕ್ಷ ಡೋಸ್ ಲಸಿಕೆಗಳನ್ನು ಉತ್ಪಾದಿಸಿದೆ. ಪ್ರತಿವಾರ ಇನ್ನಷ್ಟು ಲಸಿಕೆಗಳನ್ನು ಉತ್ಪಾದಿಸಲು ಕಂಪನಿ ಉದ್ದೇಶಿಸಿದೆ. ಸೆರಮ್ ವಿಶ್ವದಲ್ಲೇ ಅತಿ ದೊಡ್ಡ ಲಸಿಕೆ ಉತ್ಪಾದನಾ ಕಂಪನಿಯಾಗಿದೆ.

ಲಸಿಕೆ ಸುರಕ್ಷತೆ ಕುರಿತು ಇನ್ನಷ್ಟು ಮಾಹಿತಿ ನೀಡುವಂತೆ ಕೇಂದ್ರೀಯ ಔಷಧ ಮಾನದಂಡಗಳ ನಿಯಂತ್ರಣ ಸಂಘಟನೆಯ ವಿಷಯ ಪರಿಣಿತರ ಸಮಿತಿ ಕಳೆದ ಬುಧವಾರ ಕೇಳಿತ್ತು. ಶುಕ್ರವಾರ ಮಾಹಿತಿಯ ಬಗ್ಗೆ ಪರಿಶೀಲನೆ ನಡೆಸಿದ ನಂತರ ಒಪ್ಪಿಗೆ ನೀಡಲಾಗಿದೆ.

ಭಾರತ್ ಬಯೋಟೆಕ್ ಉತ್ಪಾದಿಸುತ್ತಿರುವ ಕೊವ್ಯಾಕ್ಸಿನ್ ಬಗ್ಗೆಯೂ ಪರಿಣಿತರ ಸಮಿತಿ ಪರಿಶೀಲಿಸಿದೆ. ಆದರೆ, ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಮೂಲಗಳು ಹೇಳಿವೆ.

ಕೋವಿಶೀಲ್ಡ್ ಸುರಕ್ಷತೆ ಒಪ್ಪಿಗೆಯ ಮಟ್ಟದಲ್ಲಿದೆ. ಬಹುತೇಕ ವ್ಯತಿರಿಕ್ತ ಪರಿಣಾಮಗಳು ಲಘು ಸ್ವರೂಪದವುಗಳಾಗಿವೆ. ಯಾವುದೇ ಘಟನೆಯಿಲ್ಲದೇ ಇವು ನಿವಾರಣೆಗೊಂಡಿವೆ ಎಂದು ಮೂಲಗಳು ಹೇಳಿವೆ.

ಈ ಹಿನ್ನೆಲೆಯಲ್ಲಿ (4ನೇ ಪುಟಕ್ಕೆ)

## ಭರವಸೆಯ ಹೊಸ ವರ್ಷಕ್ಕೆ ಸ್ವಾಗತ

### ಕೇಕ್ ಸವಿದು, ಪಟಾಕಿ ಸಿಡಿಸಿ ಸಂಭ್ರಮಿಸಿದ ಜನತೆ


ದಾವಣಗೆರೆ, ಜ.1- 2020ರ ಬಹುತೇಕ ದಿನಗಳಲ್ಲಿ ಕೊರೊನಾ ದಿಂದಾಗಿ ಕಂಗೆಟ್ಟಿದ್ದ ಜನತೆ, ಹೊಸ ಆಶಾಭಾವನೆಯೊಂದಿಗೆ 2021ನೇ ವರ್ಷವನ್ನು ಸಂಭ್ರಮದಿಂದ ಬರ ಮಾಡಿಕೊಂಡರು.

ರಾತ್ರಿ 12 ಗಂಟೆಯಾಗುತ್ತಲೇ ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ ಕೇಕೆ ಹಾಕಿ ಸಂಭ್ರಮಿಸಿದರು. ನಗರದ ವಿವಿಧ ಬಡಾವಣೆ, ರಸ್ತೆಗಳಲ್ಲಿ ಪಟಾಕಿ ಸದ್ದು ಹೊಸ ವರ್ಷಾಗಮನಕ್ಕೆ ಸಾಕ್ಷಿಯಾಗಿತ್ತು.

ಸಾಮಾಜಿಕ ಜಾಲ ತಾಣಗಳಲ್ಲಿ ಶುಭಾಶಯಗಳ ವಿನಿಮಯ ಜೋರಾಗಿತ್ತು. ವಾಟ್ಸಾಪ್ ಸಂದೇಶಗಳ ಮೂಲಕ ಹೊಸ ವರ್ಷದ ಶುಭಾಶಯಗಳು ವಿನಿಮಯವಾದವು. ಕೆಲವರು ಕರೆ ಮಾಡಿದರೆ, ಮತ್ತೆ ಕೆಲವರು ವೀಡಿಯೋ ಕಾಲ್ ಮೂಲಕ ಶುಭಾಶಯ ಕೋರಿದರು.

**ರಾತ್ರಿ ಪೊಲೀಸರ ವಾರ್ನಿಂಗ್ :** ರಾತ್ರಿ (4ನೇ ಪುಟಕ್ಕೆ)

## ಜಕಣಾಚಾರಿ ಸಂಸ್ಮರಣೋತ್ಸವ ಜಯಂತಿ ಆಚರಣೆ ಜಾರಿಗೆ ಶ್ಲಾಘನೀಯ



ಹರಿಹರ, ಜ.1- ಅಮರಶಿಲ್ಪಿ ಜಕಣಾಚಾರಿ ಕೆಲವೊಂದು ಪ್ರಾಂತ್ಯಕ್ಕೆ ಮಾತ್ರ ಸೀಮಿತವಾದ ವ್ಯಕ್ತಿಯಲ್ಲ. ಅವರು ಜಗತ್ತಿನ ಮಹಾನ್ ಪ್ರಸಿದ್ಧ ವ್ಯಕ್ತಿಯಾಗಿದ್ದರು. ಅಂತಹ ಚೇತನಕ್ಕೆ ಸರ್ಕಾರದಿಂದ ಸಂಸ್ಮರಣೋತ್ಸವ ನಡೆಸುವ ಕಾರ್ಯವನ್ನು ಜಾರಿಗೆ ತಂದಿರುವುದು ಶ್ಲಾಘನೀಯ ಕಾರ್ಯ ಎಂದು ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಹರಿಹರೇಶ್ವರ ದೇವಸ್ಥಾನದ ಆವರಣದಲ್ಲಿರುವ ಬಿರ್ಲಾ ಕಲ್ಯಾಣ ಮಂಟಪದಲ್ಲಿ ವಿಶ್ವಕರ್ಮ ಸಮಾಜದ ವತಿಯಿಂದ ಇಂದು ನಡೆದ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿಶ್ವಕರ್ಮ ಸಮಾಜದ ಜಕಣಾಚಾರಿಯವರ ಕೆತ್ತನೆಯ ಕಲೆಗಾರಿಕೆ ಕೆಲಸವು ವಿಶ್ವವೇ ಮೆಚ್ಚುವಂತೆ ಮಾಡಿದೆ. ಅವರ ಕಾಲದಲ್ಲಿ ಬೇಲೂರು, ಹಳೇಬೀಡು, ಹರಿಹರೇಶ್ವರ ಮುಂತಾದ ದೇವಸ್ಥಾನಗಳಲ್ಲಿ ವಿದೇಶಿಯರು ಹೆಚ್ಚಿನ ದಿನಗಳು ಉಳಿದುಕೊಂಡು ಇಲ್ಲಿನ ಇತಿಹಾಸದ ಬಗ್ಗೆ ತಮ್ಮ ಕ್ಯಾಮೆರಾಗಳ ಮೂಲಕ ಸೆರೆ ಹಿಡಿದು ನಮ್ಮ ದೇಶದ ಧರ್ಮ ಪರಂಪರೆಯ ಮತ್ತು ಸಂಸ್ಕೃತಿಗಳ ಶಕ್ತಿಯನ್ನು ಅವರ ದೇಶದ ಜನರಿಗೆ ತಿಳಿಸುವ ಕಾರ್ಯವನ್ನು ಮಾಡುತ್ತಾರೆ. ಇದನ್ನು ಗಮನಿಸಿ ರಾಜ್ಯದ ಮುಖ್ಯಮಂತ್ರಿಗಳು ಜಕಣಾಚಾರಿ ಸಂಸ್ಮರಣೋತ್ಸವ ಜಯಂತಿಯನ್ನು ಆಚರಣೆಗೆ ತಂದಿದ್ದಾರೆ. ಈ ಕಾರ್ಯಕ್ರಮದಿಂದಾಗಿ ಸಮಾಜದ ಮುಂದಿನ ಪೀಳಿಗೆಗೆ ಜಕಣಾಚಾರಿಯವರ ಕಲೆಯನ್ನು ತಿಳಿಸುವ ಮೂಲಕ ಸಮಾಜವನ್ನು ಜಾಗೃತಿ ಮೂಡಿಸುವ ಕೆಲಸವನ್ನು ಸಮಾಜದ ಮುಖಂಡರು ಮಾಡುವಂತೆ ಹೇಳಿದರು.



**ವರ್ಷದಲ್ಲಿ ಶೇ. 40 ರಷ್ಟು ಸರ್ಕಾರಿ ರಜೆಗಳು ಜಯಂತಿ ಆಚರಣೆಗೆ ಸೀಮೀತವಾಗಿವೆ. ಆದ್ದರಿಂದ ಮಹಾತ್ಮರ ಜಯಂತಿ ದಿನದಂದು ಒಂದು ಗಂಟೆ ಜಯಂತಿ ಆಚರಣೆ ಮಾಡಿ ನಂತರದಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡುವ ವ್ಯವಸ್ಥೆ ಬರಬೇಕು.**

**- ಹೆಚ್.ಎಸ್. ಶಿವಶಂಕರ್,**
**ಮಾಜಿ ಶಾಸಕರು**

ಶಾಸಕ ಎಸ್. ರಾಮಪ್ಪ ಮಾತನಾಡಿ, ವಿಶ್ವಕರ್ಮ ಸಮಾಜದಲ್ಲಿ ಹೆಚ್ಚಾಗಿ ಬಡವರು ಇರುವುದರಿಂದ ಅವರು ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡಿ ಆಸ್ತಿಯನ್ನು (2ನೇ ಪುಟಕ್ಕೆ)

## ಶಾಲೆ ಆರಂಭ: ಜಾಗ್ರತೆ ವಹಿಸಲು ಎಸ್ಸೆಸ್ ಕರೆ



ದಾವಣಗೆರೆ, ಜ.1- ಕೊರೊನಾ ಹಿನ್ನೆಲೆ ಕಳೆದ 9 ತಿಂಗಳ ಬಳಿಕ ಶಾಲಾ-ಕಾಲೇಜು ಆರಂಭಕ್ಕೆ ಸರ್ಕಾರ ಮಾರ್ಗಸೂಚಿ ನೀಡಿರುವುದು ಸ್ವಾಗತಾರ್ಹವಾಗಿದ್ದು ಮಕ್ಕಳು, ಶಿಕ್ಷಕರು ಜಾಗ್ರತೆಯಿಂದ ಇರಬೇಕು. ಇದಕ್ಕೆ ಪೋಷಕರೂ ಸಹ ಸಹಕಾರ ನೀಡಬೇಕಿದೆ ಎಂದು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ತಿಳಿಸಿದರು.

ಇಂದು ನಗರದ ನಗರ ದೇವತೆ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ದುರ್ಗಾಂಬಿಕಾ ಶಾಲೆಯ ಆವರಣದಲ್ಲಿ ಸಮಿತಿಯ ಗೌರವಾಧ್ಯಕ್ಷರು ಆದ ಎಸ್ಸೆಸ್, ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, (2ನೇ ಪುಟಕ್ಕೆ)


## ಇಂದು ಐದು ಜಿಲ್ಲೆಗಳಲ್ಲಿ ಲಸಿಕೆ ತಾಲೀಮು

ಬೆಂಗಳೂರು, ಜ. 1 - ಕೊರೊನಾ ಸಾಂಕ್ರಾಮಿಕ ರೋಗಕ್ಕೆ ಲಸಿಕೆ ನೀಡುವ ಪೂರ್ವಭಾವಿ ಸಿದ್ಧತೆ ನಾಳೆಯಿಂದ ರಾಜ್ಯದಲ್ಲಿ ಆರಂಭವಾಗಲಿದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ.

ಸೋಂಕು ಹೆಚ್ಚು ಇರುವ ಬೆಂಗಳೂರು, ಮೈಸೂರು, ಕಲಬುರಗಿ, ಶಿವಮೊಗ್ಗ ಸೇರಿದಂತೆ ಐದು ಜಿಲ್ಲೆಗಳಲ್ಲಿ ಅಧಿಕೃತ ಲಸಿಕೆ ನೀಡುವುದಕ್ಕೂ ಮುನ್ನ ಸಿದ್ಧತೆಗಳು ಈ ಜಿಲ್ಲೆಗಳಲ್ಲಿ ಜರುಗಲಿವೆ ಎಂದವರು ಹೇಳಿದ್ದಾರೆ.



ಇಲ್ಲಿನ ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆಯನ್ನು ಹೇಗೆ ಸಂಗ್ರಹಿಸಿಡಬೇಕು. ನಂತರ ಮೊದಲ ಆದ್ಯತೆ ಯಾರಿಗೆ ನೀಡಬೇಕು. ಅದನ್ನು ಹೇಗೆ ನೀಡುವುದು, ಲಸಿಕೆ ನೀಡಿದ (2ನೇ ಪುಟಕ್ಕೆ)

ಶ್ಯಾಬನೂರಿನಲ್ಲಿ ಇಂದು ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ

ದಿನಾಂಕ 02.01.2021ರ ಶನಿವಾರ ಸಂಜೆ

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.


## ಕೃಷಿ ಕಾಯ್ದೆ ವಾಪಸ್ : ಮಾಲ್, ಪೆಟ್ರೋಲ್ ಪಂಪ್ ಬಂದ್

ನವದೆಹಲಿ, ಜ. 1 – ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯದೇ ಹೋದರೆ ಮಾಲ್‌ಗಳು ಹಾಗೂ ಪೆಟ್ರೋಲ್ ಪಂಪ್‌ಗಳನ್ನು ಬಲವಂತವಾಗಿ ಬಂದ್ ಮಾಡಿಸುವುದಾಗಿ ರೈತ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಜನವರಿ (4ನೇ ಪುಟಕ್ಕೆ)

## ಕೇಂದ್ರ ನೌಕರರಿಗೆ ಅಂಗವೈಕಲ್ಯ ಪರಿಹಾರ

ನವದೆಹಲಿ, ಜ. 1 – ಕರ್ತವ್ಯದಲ್ಲಿ ತೊಡಗಿದ ಸಂದರ್ಭದಲ್ಲಿ ಅಂಗವೈಕಲ್ಯಕ್ಕೆ ಗುರಿಯಾಗುವ ಎಲ್ಲ ಕೇಂದ್ರ ಸರ್ಕಾರದ ನೌಕರರಿಗೂ ಅಂಗವೈಕಲ್ಯದ ಪರಿಹಾರ ನೀಡಲು ಹಾಗೂ ಸೇವೆಯಲ್ಲಿ ಮುಂದುವರೆಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ (4ನೇ ಪುಟಕ್ಕೆ)

## ಡಿಸೆಂಬರ್‌ನಲ್ಲಿ ದಾಖಲೆ ಜಿಎಸ್‌ಟಿ ಸಂಗ್ರಹ

ನವದೆಹಲಿ, ಜ. 1 – ಡಿಸೆಂಬರ್ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹ ದಾಖಲೆಯ 1.15 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಇದು ಕಠಿಣ ಲಾಕ್‌ಡೌನ್ ನಂತರ ಆರ್ಥಿಕ ಚೇತರಿಕೆಯ ಸಂಕೇತ ನೀಡಿದೆ.

ಸತತ ಮೂರನೇ ತಿಂಗಳು ಜಿ.ಎಸ್.ಟಿ. ಸಂಗ್ರಹ 1 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚಾಗಿದೆ. ಆರ್ಥಿಕ ಚೇತರಿಕೆ ಹಾಗೂ ಜಿ.ಎಸ್.ಟಿ. ವಂಚಕರ ವಿರುದ್ಧ ಕ್ರಮ ತೆಗೆದುಕೊಂಡಿರುವುದು ಇದಕ್ಕೆ ಕಾರಣ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

2020ರ ಡಿಸೆಂಬರ್‌ನಲ್ಲಿ (2ನೇ ಪುಟಕ್ಕೆ)


ಹಳೆ ಹರಿದ ರೇಷ್ಮೆ ಸೀರೆಗಳಿಗೆ ಸ್ಥಳದಲ್ಲಿಯೇ ಹಣ ಪಡೆಯಿರಿ

ಪ್ಯೂರ್ ಜರಿ ಇರುವ ಕಾಂಚೀಪುರಂ (ಹರಿದ) ಸಿಲ್ಕ್ ಸೀರೆ, ಕಾಂಚಿಪುರಂ, ಬನಾರಸ್, ಧರ್ಮಾವರಂ, ಮೈಸೂರು ಸಿಲ್ಕ್, ರೇಷ್ಮೆ ಪಂಚೆಗಳು, ರೇಷ್ಮೆ ಲಂಗಗಳು, ಯಾವುದೇ ರೀತಿಯಲ್ಲಿದ್ದರೂ ಕಾಂಚಿಪುರಂ ಮಿಲ್ ಬೆಲೆಗೆ ತೆಗೆದುಕೊಳ್ಳುತ್ತೇವೆ.

5 ದಿನಗಳು ಮಾತ್ರ

ಸ್ಥಳದಲ್ಲೇ ಹಣ ಕೊಟ್ಟು ಖರೀದಿಸಲಾಗುವುದು ಸರಿಯಾದ ವಿಳಾಸಕ್ಕೆ ಭೇಟಿ ಕೊಡಿ

ಶ್ರೀ ಕಾಂಚೀಪುರಂ ಸಿಲ್ಕ್ ಸೆಂಟರ್


ದಾವಣಗೆರೆ : ತ್ರಿಶೂಲ್ ಥಿಯೇಟರ್ ಕಾಂಪ್ಲೆಕ್ಸ್, ಅಪೂರ್ವ ಹೋಟೆಲ್ ಎದುರು, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಪಿ.ಬಿ. ರಸ್ತೆ,
ಮೊ : 97407 00036

ಈ ಪೇಪರ್ ಮತ್ತು ರೇಷ್ಮೆ ಸೀರೆಯನ್ನು ತಂದವರಿಗೆ 1 ಗ್ರಾಂ. ಗೋಲ್ಡ್ ಪ್ಲೇಟ್ ಬಾಂಬೆ ಡಿಸೈನ್ ಬಳೆ ಉಚಿತ.

ಹಳೆಯ ಹರಿದ ಟಿಷ್ಯು ಸೀರೆಗಳು ರೂ. 5000 ರಿಂದ 15,000ದವರೆಗೆ ತೆಗೆದುಕೊಳ್ಳಲಾಗುವುದು.

02.01.2021ರಿಂದ 06.01.2021ರ ವರೆಗೆ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿ

ಕೆಲಸದ ವೇಳೆ ಬೆಳಿಗ್ಗೆ 10-00 ರಿಂದ 8-00 ರ ವರೆಗೆ ಭಾನುವಾರವೂ ಅಂಗಡಿ ಇದೆ. ಕಾರ್ ಪಾರ್ಕಿಂಗ್ ಇದೆ.





ಎಂಟನೇ ವರ್ಷದ ಪುಣ್ಯಸ್ಮರಣೆ



ದಿ|| ನ್ಯಾಮತಿ ಎಸ್. ವೀರಣ್ಣನವರು

ಜನನ : 13.05.1950 ನಿಧನ : 02.01.2013

ಖ್ಯಾತ ವರ್ತಕರು ಹಾಗೂ ಸಂತೋಷ್ ವಿಡಿಯೋ ಮಾಲೀಕರು

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ನ್ಯಾಮತಿ ಶಿವಲೀಲಾ ಮತ್ತು

ಮಕ್ಕಳಾದ : ಸಂತೋಷ್‌ಕುಮಾರ್, ಆಶಾರಾಣಿ, ಉಷಾರಾಣಿ, ಸಂತೋಷ್ ಕಾಂಪ್ಲೆಕ್ಸ್‌ನ ವ್ಯಾಪಾರಸ್ಥರು ಮತ್ತು ವಿಡಿಯೋ ಸಿಬ್ಬಂದಿ ವರ್ಗದವರು ಹಾಗೂ ಬಂಧು-ಮಿತ್ರರು, ದಾವಣಗೆರೆ.







ಅಭಿನಂದನೆಗಳು

ದೊಡ್ಡಬಾತಿ ಗ್ರಾಮ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗಿರುವ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಅಧ್ಯಕ್ಷರು ಹಾಗೂ ಕಿಸಾನ್ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ

ಶ್ರೀ ಬಾತಿ ಶಿವಕುಮಾರ್

ಅವರಿಗೆ ಹಾರ್ದಿಕ ಅಭಿನಂದನೆಗಳು.





ಕೆ.ಎಲ್.ಹರೀಶ್ ಬಸಾಪುರ
ರಾಜ್ಯ ಕಾರ್ಯದರ್ಶಿ
ಕೆಪಿಸಿಸಿ ಸಾಮಾಜಿಕ ಜಾಲತಾಣ

ಮೊಹಮದ್ ಜೀಕ್ರಿಯ
ಜಿಲ್ಲಾ ಕಾರ್ಯದರ್ಶಿ
ಕಿಸಾನ್ ಕಾಂಗ್ರೆಸ್

# ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕರಿಸಲು ಕರೆ

## ಜಗಳೂರಿನಲ್ಲಿ ವಿದ್ಯಾಗಮ-2ಕ್ಕೆ ಜಿ.ಪಂ ಅಧ್ಯಕ್ಷೆ ಶಾಂತಕುಮಾರಿ ಚಾಲನೆ



ಜಗಳೂರು, ಜ.1- ಶಿಕ್ಷಣ ಸಚಿವರ ಹಾಗೂ ಶಿಕ್ಷಣ ತಜ್ಞರ ಸಲಹೆಯಂತೆ ಮುಂಜಾಗ್ರತಾ ಕ್ರಮಗಳೊಂದಿಗೆ ವಿದ್ಯಾಗಮ ಯೋಜನೆ ಆರಂಭವಾಗಿದ್ದು, ಪೋಷಕರು ಭಯಪಡದೆ ಸರ್ಕಾರದ ಜೊತೆ ಕೈಜೋಡಿಸಿ ಮಕ್ಕಳ ಶೈಕ್ಷಣಿಕ ಅಭಿವೃದ್ದಿಗೆ ಕೈಜೋಡಿಸಬೇಕು ಎಂದು ಜಿಪಂ ಅಧ್ಯಕ್ಷೆ ಶಾಂತಕುಮಾರಿ ಮನವಿ ಮಾಡಿದರು.

ತಾಲ್ಲೂಕಿನ ಬಿಳಿಚೋಡು ಗ್ರಾಮದ ಸರ್ಕಾರಿ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿದ್ಯಾಗಮ-2 ಪ್ರಾರಂಭೋತ್ಸವ ಕಾರ್ಯಕ್ರಮ ಹಾಗೂ ಪ್ರಾಥಮಿಕ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

ದೇಶಾದಾದ್ಯಂತ ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಮಾರ್ಚ್‌ನಿಂದ ಪರೀಕ್ಷೆಗಳನ್ನೊಳಗೊಂಡಂತೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದ್ದು ಇದೀಗ ಶಾಲೆಗಳು ಆರಂಭವಾಗಿವೆ. ಮಕ್ಕಳು ಉತ್ಸಾಹದಿಂದ ಶಾಲೆಗೆ ಬರುತ್ತಿದ್ದಾರೆ ಎಂದರು.

ಬಿಳಿಚೋಡು ಗ್ರಾಮದ ಸರ್ಕಾರಿ ಪಬ್ಲಿಕ್ ಶಾಲೆಯನ್ನು ಮಾದರಿ ಶಾಲೆಯನ್ನಾಗಿಸಲು ಅಗತ್ಯ ನೆರವು ಕಲ್ಪಿಸಿಕೊಡುವುದಾಗಿ ಜಿ.ಪಂ. ಅಧ್ಯಕ್ಷೆ ಶಾಂತಕುಮಾರಿ ಭರವಸೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎಸ್. ವೆಂಕಟೇಶ್ ಮಾತನಾಡಿ, ಸರ್ಕಾರ ಪುನಃ ವಿದ್ಯಾಗಮ ಯೋಜನೆಯಡಿ ಶಾಲೆ ಆರಂಭಿಸಲು ಅನುಮತಿ ನೀಡಿದ್ದು ಮಾರ್ಗಸೂಚಿಯಂತೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

ಶಿಕ್ಷಕರು, ಮಕ್ಕಳು ಕಡ್ಡಾಯವಾಗಿ ಸಾಮಾಜಿಕ ಅಂತರ, ಸ್ಯಾನಿಟೈಸರ್ ಮಾಸ್ಕ್ ಬಳಕೆ ಮಾಡಬೇಕು. ಸಾಧ್ಯವಿದ್ದಷ್ಟು ಸ್ಮಾರ್ಟ್ ಕ್ಲಾಸ್ ಆನ್‌ಲೈನ್‌ನಲ್ಲಿ ಮಾಹಿತಿ ಪಾಠ ಪ್ರವಚನ ನೀಡಲಾಗುತ್ತಿದೆ. ಪೋಷಕರು ಒಪ್ಪಿಗೆ ಸೂಚಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಾ.ಪಂ ಇಓ ಮಲ್ಲಾನಾಯ್ಕ, ಟಿಪಿಓ ವೆಂಕಟೇಶ್, ಇಸಿಓ ಮಂಜಣ್ಣ, ಮುಖ್ಯಶಿಕ್ಷಕರಾದ ಈರಮ್ಮ, ಆನಂದಪ್ಪ, ಶಿಕ್ಷಕ ಬಸವರಾಜ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಸುಧೀರ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸೋಲು-ಗೆಲುವು ಸಮಾನವಾಗಿ ಸ್ವೀಕರಿಸುವವರಿಗೆ ಉನ್ನತ ಸ್ಥಾನ



**ಹರಿಹರದಲ್ಲಿನ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ ಕಾಗಿನಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಚಾಲನೆ**

ಹರಿಹರ, ಜ.1- ಕ್ರೀಡಾಪಟುಗಳು ಗೆದ್ದಾಗ ಹಿಗ್ಗದೇ, ಸೋತಾಗ ಕುಗ್ಗದೇ, ಸೋಲು ಮತ್ತು ಗೆಲವು ಎರಡನ್ನೂ ಸಮಾನವಾಗಿ ಸ್ವೀಕರಿಸುವ ಗುಣಗಳನ್ನು ಹೊಂದಿದಾಗ ವಿಶ್ವಮಟ್ಟದ ಕ್ರೀಡಾಪಟುವಾಗಿ ಸಾಧನೆ ಮಾಡಲಿಕ್ಕೆ ಸಾಧ್ಯವಿದೆ ಎಂದು ಕಾಗಿನಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಹೇಳಿದರು.

ನಗರದ ಗಾಂಧಿ ಮೈದಾನದಲ್ಲಿ ಎನ್.ಹೆಚ್. ಶ್ರೀನಿವಾಸ್ ಗೆಳೆಯರ ಬಳಗದ ವತಿಯಿಂದ ನಡೆದ ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಎನ್.ಹೆಚ್. ಶ್ರೀನಿವಾಸ್ ಮಾತನಾಡಿ, ಈ ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಆಟಗಾರರಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ ತಂಡಕ್ಕೆ 60 ಸಾವಿರ ನಗದು ಮತ್ತು ದ್ವಿತೀಯ ಸ್ಥಾನಕ್ಕೆ 30 ಸಾವಿರ ನಗದು ಮತ್ತು ಉತ್ತಮವಾದ ಪಾರಿತೋಷಕ ನೀಡಿ ಗೌರವಿಸಲಾಗುತ್ತದೆ ಎಂದು ಹೇಳಿದರು.

ಈ ಪಂದ್ಯಾವಳಿಯ ಮತ್ತೊಂದು ವಿಶೇಷತೆಯೆಂದರೆ ನಗರದಲ್ಲಿರುವ ನೌಕರ ವರ್ಗಕ್ಕೆ ಕ್ರೀಡಾ ಮನೋಭಾವ ಹೆಚ್ಚಿಸುವ ದೃಷ್ಟಿಯಿಂದ 'ಅಫಿಷಿಯಲ್ ಕಪ್' ಸಹ ಆಯೋಜನೆ ಮಾಡಲಾಗಿದೆ. ಇದರಲ್ಲಿ ಪೊಲೀಸ್ ಇಲಾಖೆ, ವಿದ್ಯುಚ್ಛಕ್ತಿ ಇಲಾಖೆ, ನಗರದ ವಕೀಲರ ತಂಡಗಳು ಮತ್ತು ಸಾಮಾಜಿಕ ಕಾರ್ಯಕರ್ತರ ನಾಲ್ಕು ತಂಡಗಳು ಭಾಗವಹಿಸಲಿವೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಕೋಡಿಯಾಲ ಹೊಸಪೇಟೆ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ, ಮಾಜಿ ಶಾಸಕ ಬಿ.ಪಿ.ಹರೀಶ್, ಬಿಜೆಪಿ ಮುಖಂಡರಾದ ದೇವೇಂದ್ರಪ್ಪ ಕುಣೆಬೆಳಕೆರೆ, ನಗರಸಭಾ ಮಾಜಿ ಸದಸ್ಯ ನಾಗರಾಜ್ ಮೆಹರ್ವಾಡೆ, ನಗರಸಭೆ ಸದಸ್ಯರಾದ ಎನ್. ರಜನಿಕಾಂತ್, ಕೆ.ಜಿ.ಸಿದ್ದೇಶ್, ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕೆ. ಲಕ್ಷ್ಮಪ್ಪ, ಕಾಗಿನೆಲೆಯ ವಿದ್ಯಾಪೀಠದ ಶಾಲೆ ಶಿಕ್ಷಕ ಬೀರೇಶ್, ರಾಘವೇಂದ್ರ ಉಪಾಧ್ಯಾಯ, ವಕೀಲ ಆನಂದ್ ಅತಾವುಲ್ಲಾ, ನಾಗರಾಜ್ ಹುಲಿಕಟ್ಟಿ, ಡಾನ್ ಬದ್ರಿ ಶ್ರೀನಿವಾಸ್, ಸುಚೇತ್ ಪೂಜಾರಿ, ಜಗದೀಶ್ ಸಿ.ಡಿ, ಶ್ರೀನಿಧಿ, ಮಂಜು ಮತ್ತಿತರರು ಉಪಸ್ಥಿತರಿದ್ದರು.

## ಶಾಲೆಗಳಲ್ಲಿ ಮರುಕಳಿಸಿದ ಹುರುಪು

(1ನೇ ಪುಟದಿಂದ) ಈ ಸಂದರ್ಭದಲ್ಲಿ 'ಜನತಾವಾಣಿ'ಯೊಂದಿಗೆ ಮಾತನಾಡಿದ ಶಾಲೆಯ ಸಹ ಶಿಕ್ಷಕ ಜಗದೀಶ್, ಕೋವಿಡ್ ಮಾರ್ಗಸೂಚಿ ಅನ್ವಯ ತರಗತಿಗಳನ್ನು ನಡೆಸಲಾಗುತ್ತಿದೆ. ಮಕ್ಕಳು ಪೋಷಕರಿಂದ ಒಪ್ಪಿಗೆ ಪತ್ರ ತರುವಂತೆ ಹೇಳಿದ್ದೇವೆ. 6-9ನೇ ತರಗತಿ ಮಕ್ಕಳಿಗೆ ಬೆಳಿಗ್ಗೆ 10 ರಿಂದ 12.30ರವರೆಗೆ ಮೂರು ಪೀರಿಯಡ್ ತರಗತಿ ನಡೆಸುತ್ತೇವೆ. ಮಧ್ಯಾಹ್ನ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ತರಗತಿಗಳು ನಡೆಯಲಿವೆ ಎಂದರು. ಹೆಚ್ಚಿನ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಒಲವು ತೋರಿದ್ದಾರೆ. ಕೆಲವರು ಮಕ್ಕಳ ಜವಾಬ್ದಾರಿ ನಿಮ್ಮದೇ ಎಂದು ಶಿಕ್ಷಕರಿಗೆ ಹೇಳುತ್ತಾರೆ. ಈ ವೇಳೆ ನಾವು ಪೋಷಕರಿಗೆ ಭರವಸೆ ನೀಡಿ, ಅರಿವು ಮೂಡಿಸಿ ಮನವೊಲಿಸುತ್ತೇವೆ ಎಂದರು.

ಸಿದ್ಧಗಂಗಾ ಶಾಲೆಯಲ್ಲೂ ತರಗತಿಗಳು ಆರಂಭವಾಗಿದ್ದವು. ಪತ್ರಿಕೆಯೊಂದಿಗೆ ಮಾತನಾಡಿದ ಮುಖ್ಯೋಪಾಧ್ಯಾಯರಾದ ಶ್ರೀಮತಿ ಜಸ್ಟಿನ್ ಡಿಸೌಜ, ಕೋವಿಡ್ ಮಾರ್ಗಸೂಚಿ ಪ್ರಕಾರ ತರಗತಿ ಆರಂಭವಾಗಿವೆ. ಬ್ಯಾಚ್ ಪ್ರಕಾರ ತರಗತಿಗಳನ್ನು ನಡೆಸಲಾಗುತ್ತಿದೆ. ಶೇ.70ರಷ್ಟು ಹತ್ತನೇ ತರಗತಿ ಮಕ್ಕಳು ಬಂದಿದ್ದರೆ, 6 ರಿಂದ 9ನೇ ತರಗತಿ ಮಕ್ಕಳು ಶೇ.10ರಷ್ಟು ಮಾತ್ರ ಆಗಮಿಸಿದ್ದಾರೆ. ಹೊಸ ವರ್ಷ ಹಾಗೂ ವಾರಾಂತ್ಯದ ದಿನಗಳಾಗಿ ರುವುದರಿಂದ ಸೋಮವಾರ ಹೆಚ್ಚಿನ ಮಕ್ಕಳು ಬರುವ ನಿರೀಕ್ಷೆ ಇದೆ ಎಂದರು.

## ಐದು ಜಿಲ್ಲೆಗಳಲ್ಲಿ ಲಸಿಕೆ ತಾಲೀಮು

(1ನೇ ಪುಟದಿಂದ) ನಂತರ ಸ್ವಚ್ಛತೆ ಮುನ್ನೆಚ್ಚರಿಕಾ ಕ್ರಮಗಳೇನು ಎಂಬೆಲ್ಲ ಬಗ್ಗೆಯು ಸಂಬಂಧಪಟ್ಟವರಿಗೆ ತರಬೇತಿ ಮತ್ತು ಮಾಹಿತಿ ನೀಡಲಾಗುವುದು ಎಂದವರು ಹೇಳಿದ್ದಾರೆ. ಈ ಮಾಸಾಂತ್ಯದ ಯಾವುದೇ ಸಂದರ್ಭದಲ್ಲಿ ಲಸಿಕೆ ಲಭ್ಯವಾಗುವ ಸೂಚನೆ ನೀಡಿದ ಸಚಿವರು, ವರ್ಷಾಂತ್ಯಕ್ಕೆ ರಾಜ್ಯದ ಎಲ್ಲರಿಗೂ ಲಸಿಕೆ ಲಭ್ಯವಾಗಲಿದೆ. ಲಸಿಕೆಯನ್ನು ಹಂತ ಹಂತವಾಗಿ ನೀಡಲಾಗುವುದು ಎಂದರು.

ನಂತರ ಆರೋಗ್ಯ ವಿಷನ್‌ಗ್ರೂಪ್ ಸಭೆ ನಡೆಸಿದ ಅವರು, ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆ ತರಲಾಗುವುದು. ಕೈಗೆಟಕುವ ದರದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲೂ ಆರೋಗ್ಯ ಸೇವೆ ನೀಡುವುದು. ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ, ಗ್ರಾಮೀಣ ಮಟ್ಟದಲ್ಲಿ ಆರೋಗ್ಯ ಸೇವೆಗೆ ಒತ್ತು ಕೊಡಲಾಗುವುದು ಎಂದರು.

ರಾಜ್ಯದಲ್ಲಿ ಬ್ರಿಟನ್ ಕೊರೊನಾ ಸೋಂಕಿತರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ. ರಾಷ್ಟ್ರದಲ್ಲಿ ಒಟ್ಟು 29 ಮಂದಿಗೆ ಹೊಸ ವೈರಾಣು ತಗಲಿದ್ದು, ಅದರಲ್ಲಿ ಕರ್ನಾಟಕದವರೇ 10 ಮಂದಿ ಎಂದು ಸುಧಾಕರ್ ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು.

## ಶಾಲೆ ಆರಂಭ: ಜಾಗ್ರತೆ ವಹಿಸಲು ಕರೆ

(1ನೇ ಪುಟದಿಂದ) ಶಾಲಾ-ಕಾಲೇಜು ಆರಂಭವನ್ನು ಸ್ವಾಗತಿಸಿದರು. ಅಲ್ಲದೇ, ಹೊಸ ವರುಷ ಎಲ್ಲರ ಬಾಳನ್ನು ಬೆಳೆಗಿ ಸುವಂತಾಗಲಿ ಎಂದು ಆಶಿಸಿದರು.

ನಂತರ ಮಾತನಾಡಿದ ಅವರು, ಶಾಲಾ-ಕಾಲೇಜು ಆರಂಭವಾಗದೇ ಇದ್ದರೆ ಮಕ್ಕಳ ಮುಂದಿನ ಭವಿಷ್ಯಕ್ಕೆ ಧಕ್ಕೆ ಆಗುತ್ತಿತ್ತು. ಸರ್ಕಾರ ನೀಡಿರುವ ಮಾರ್ಗಸೂಚಿಯಂತೆ ಶಾಲಾ-ಕಾಲೇ ಜುಗಳನ್ನು ಜಾಗ್ರತೆಯಿಂದ ನಡೆಸುವಂತೆ ಶಿಕ್ಷಕರಿಗೆ ಸಲಹೆ ನೀಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಜಿಲ್ಲೆಯಲ್ಲಿ ಎಲ್ಲಾ ಶಾಲಾ-ಕಾಲೇಜುಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಆರಂಭಿಸಲು ಸೂಚಿಸಲಾಗಿದೆ. ನೂತನ ವರುಷ ಮಕ್ಕಳ ಭವಿಷ್ಯವನ್ನು ಉಜ್ವಲವಾಗಿಸಲಿ ಎಂದು ಹಾರೈಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ಶಾಲಾ ಮಕ್ಕಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯ ವಿನಾಯಕ ಪೈಲ್ವಾನ್, ಮಾಜಿ ಸದಸ್ಯ ಶಿವನಳ್ಳಿ ರಮೇಶ್, ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್ ಧರ್ಮದರ್ಶಿಗಳಾದ ಯಜಮಾನ್ ಮೋತಿ ವೀರಣ್ಣ, ಗೌಡ್ರು ಚನ್ನಬಸಪ್ಪ, ಜೆ.ಕೆ.ಕೊಟ್ರಬಸಪ್ಪ, ಸೊಪ್ಪಿನವರ ಗುರುರಾಜ್, ಹುಮಂತರಾವ್ ಜಾಧವ್, ರಾಮಕೃಷ್ಣ, ಮುಖಂಡರುಗಳು, ಮುಖ್ಯೋಪಾಧ್ಯಾಯರು, ಶಿಕ್ಷಕರು, ಶಾಲೆಯ ಸಿಬ್ಬಂದಿ ವರ್ಗದವರು ಇದ್ದರು.

## ಕೊಟ್ಟೂರಿನ ಶ್ರೀ ಗುರು ಬಸವೇಶ್ವರ ದೇವಸ್ಥಾನದಲ್ಲಿ ನಿತ್ಯದಾಸೋಹ ಆರಂಭ



ಕೊಟ್ಟೂರು, ಜ.1- ಕೊಟ್ಟೂರಿನ ಶ್ರೀ ಗುರು ಬಸವೇಶ್ವರ ದೇವಸ್ಥಾನದಲ್ಲಿ ಸ್ಥಗಿತಗೊಂಡಿದ್ದ ನಿತ್ಯ ದಾಸೋಹ ಜ.1 ರಿಂದ ಪುನರಾರಂಭಗೊಂಡಿದೆ. ಈ ಸಂದರ್ಭದಲ್ಲಿ ಕ್ರಿಯಾ ಮೂರ್ತಿಗಳಾದ ಪ್ರಕಾಶ್ ಸ್ವಾಮಿ, ಜಿ.ಪಂ. ಸದಸ್ಯ ಎಂ.ಎಂ.ಜೆ ಹರ್ಷವರ್ಧನ್, ಪ್ರಧಾನ ಧರ್ಮಕರ್ತ ಸಿ.ಹೆಚ್.ಎಂ. ಗಂಗಾಧರಯ್ಯ, ಬೂದಿ ಶಿವು, ಮರಬದ ನಾಗರಾಜ್, ಜಿ.ಮಂಜುನಾಥ್, ಬಸವರಾಜ್ ಮತ್ತಿತರರಿದ್ದರು.

## ಬ್ಯಾಂಕುಗಳಿಗೆ 3 ಸಾವಿರ ಕೋಟಿ ರೂ. ವಂಚನೆ

**ಶಕ್ತಿ ಭೋಗ್ ಕಂಪನಿ ವಿರುದ್ಧ ಸಿಬಿಐ ಪ್ರಕರಣ**

ನವದೆಹಲಿ, ಜ. 1 – ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೇತೃತ್ವದ ಹತ್ತು ಕಂಪನಿಗಳ ಕೂಟಕ್ಕೆ 3,269 ಕೋಟಿ ರೂ. ವಂಚನೆ ಮಾಡಿದ ಆರೋಪದ ಮೇಲೆ ದೆಹಲಿಯ ಶಕ್ತಿ ಭೋಗ್ ಫುಡ್ಸ್ ಕಂಪನಿ ವಿರುದ್ಧ ಸಿ.ಬಿ.ಐ. ಪ್ರಕರಣ ದಾಖಲಿಸಿದೆ.

ಎಸ್.ಬಿ.ಐ. ನೀಡಿದ ದೂರಿನ ಆಧಾರದ ಮೇಲೆ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಕೇವಲ್ ಕೃಷ್ಣ ಕುಮಾರ್ ಹಾಗೂ ನಿರ್ದೇಶಕರಾದ ಸಿದ್ಧಾರ್ಥ ಕುಮಾರ್ ಹಾಗೂ ಸುನಂದ ಕುಮಾರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇವರು ಪೋರ್ಜರಿ ದಾಖಲೆ ಮಾಡಿ ಹಣ ಪಡೆದಿದ್ದಾರೆ ಎಂದು ಆರೋಪಿ ಸಲಾಗಿದೆ. 24 ವರ್ಷದ ಹಳೆಯ ಕಂಪನಿ 2015ರಲ್ಲಿ ಕಾರ್ಯ ನಿರ್ವಹಣೆ ಸ್ಥಗಿತಗೊಳಿಸಿತ್ತು. 2019ರಲ್ಲಿ ವಂಚನೆ ಆಗಿರುವುದನ್ನು ಘೋಷಿಸಲಾಗಿತ್ತು.

## ಡಿಸೆಂಬರ್‌ನಲ್ಲಿ ದಾಖಲೆ ಜಿಎಸ್‌ಟಿ ಸಂಗ್ರಹ

(1ನೇ ಪುಟದಿಂದ) 1,15,174 ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿದೆ. ಇದು ಡಿಸೆಂಬರ್ 2019ಕ್ಕಿಂತ ಶೇ.12ರಷ್ಟು ಹೆಚ್ಚಾಗಿದೆ. ಆ ತಿಂಗಳಲ್ಲಿ 1.03 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು.

2020ರ ನವೆಂಬರ್‌ನಿಂದ ಡಿಸೆಂಬರ್ 31ರವರೆಗೆ 87 ಲಕ್ಷ ಜಿಎಸ್‌ಟಿಆರ್ -3ಬಿಗಳು ದಾಖಲಾಗಿವೆ. ಕಳೆದ 21 ತಿಂಗಳಲ್ಲಿಯೇ ಡಿಸೆಂಬರ್‌ನಲ್ಲಿ ಅತಿ ಹೆಚ್ಚಿನ ಜಿಎಸ್.ಟಿ. ಸಂಗ್ರಹವಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಜುಲೈ 1, 2017ರ ನಂತರ ಇದೇ ಮೊದಲ ಬಾರಿಗೆ ಅತಿ ಹೆಚ್ಚಿನ ಜಿ.ಎಸ್.ಟಿ. ಸಂಗ್ರಹವಾಗಿದೆ.

ಈ ಹಿಂದೆ ಏಪ್ರಿಲ್ 2019ರಲ್ಲಿ 1.13 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು.

ಲಾಕ್‌ಡೌನ್ ಕಾರಣದಿಂದಾಗಿ 2020ರ ಏಪ್ರಿಲ್‌ನಲ್ಲಿ ಜಿ.ಎಸ್.ಟಿ. ಸಂಗ್ರಹ 32,172 ಕೋಟಿ ರೂ.ಗಳವರೆಗೂ ಕುಸಿದಿತ್ತು. ಲಾಕ್‌ಡೌನ್ ತೆರವುಗೊಳಿಸುತ್ತಾ ಸಾಗಿದಂತೆ ತೆರಿಗೆ ಸಂಗ್ರಹಣೆಯಲ್ಲೂ ಸುಧಾರಣೆ ಕಂಡು ಬಂದಿದೆ.

2019ರ ವರ್ಷಕ್ಕೆ ಹೋಲಿಸಿದರೆ 2020ರ ಡಿಸೆಂಬರ್‌ನಲ್ಲಿ ಆಮದಿನಿಂದ ದೊರೆಯುವ ಆದಾಯ ಶೇ.27 ಹಾಗೂ ದೇಶೀಯ ವಹಿವಾಟಿನಿಂದ ದೊರೆಯುವ ಆದಾಯ ಶೇ.8ರಷ್ಟು ಹೆಚ್ಚಾಗಿದೆ.

ಸಿಜಿಎಸ್‌ಟಿ ಪ್ರಮಾಣ 21,365 ಕೋಟಿ ರೂ., ಎಸ್‌ಜಿಎಸ್‌ಟಿ 27,804 ಕೋಟಿ ರೂ., ಐಜಿಎಸ್‌ಟಿ 57,426 ಕೋಟಿ ರೂ. ಹಾಗೂ ಸೆಸ್ 8,579 ಕೋಟಿ ರೂ. ಆಗಿದೆ.

## ಜಯಂತಿ ಆಚರಣೆ ಜಾರಿಗೆ ಶ್ಲಾಘನೀಯ



(1ನೇ ಪುಟದಿಂದ) ಕೊಡಿಸಿ ಅವರನ್ನು ಆಸ್ತಿಯನ್ನಾಗಿ ಮಾಡುವಂಮಾಡುವುದು ಕಷ್ಟಕರ. ಆಗಾಗಿ ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಿಸಿ ಅವರನ್ನು ಆಸ್ತಿಯನ್ನಾಗಿ ಮಾಡುವಂತೆ ಮತ್ತು ವಿಶ್ವಕರ್ಮ ಸಮಾಜಕ್ಕೆ ಸಮುದಾಯ ಭವನ ಕಟ್ಟಡದ ನಿರ್ಮಾಣ ಮಾಡುವುದಕ್ಕೆ ನಿವೇಶನ ಕೊಡಿಸುವ ಭರವಸೆಯನ್ನು ನೀಡಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಸರ್ಕಾರ ಸಮಾಜಕ್ಕೆ ಒಂದು ಜಯಂತಿ ಆಚರಣೆಯನ್ನು ಜಾರಿಗೆ ತಂದು ಸಮಾಜದ ಕಾರ್ಯಕ್ರಮಗಳ ಮೂಲಕ ಸಮಾಜದಲ್ಲಿನ ಬಡವರಿಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದೆ ಎಂದು ಭಾವಿಸಲಾಗಿದ್ದು, ಆದರ ಜೊತೆಯಲ್ಲಿ ಸಮಾಜದ ಮತಗಳನ್ನು ತಮ್ಮ ಪಕ್ಷಗಳಿಗೆ ಪಡೆಯಲು ಜಯಂತಿ ಆಚರಣೆ ವ್ಯವಸ್ಥೆ ನಡೆಯುತ್ತದೆ. ಇದರಿಂದ ವರ್ಷದಲ್ಲಿ ಶೇ. 40 ರಷ್ಟು ಸರ್ಕಾರಿ ರಜೆಗಳು ಜಯಂತಿ ಆಚರಣೆಗೆ ಸಿಮೀತವಾಗಿವೆ. ಆದ್ದರಿಂದ ಮಹಾತ್ಮರ ಜಯಂತಿ ದಿನದಂದು ಒಂದು ಗಂಟೆ ಜಯಂತಿ ಆಚರಣೆ ಮಾಡಿ ನಂತರದಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡುವ ವ್ಯವಸ್ಥೆ ಬರಬೇಕು ಎಂದು ತಿಳಿಸಿದರು.

ವಿಶ್ವಕರ್ಮ ಸಮಾಜದವರು ಮಾಡುವ ಕಾಯಕದಿಂದ ರೈತನ ಬದುಕು ಹಸನಾಗುತ್ತದೆ, ಮಹಿಳೆಯರು ಹಾಕಿಕೊಳ್ಳುವ ಆಭರಣದಿಂದ ಸೌಂದರ್ಯ ಹೆಚ್ಚಾಗುತ್ತದೆ. ಜಕಣಾಚಾರಿ ಅವರು ತಮ್ಮ ಪವಿತ್ರ ಮನಸ್ಸಿಗೆ ಮತ್ತು ಪ್ರಾಮಾಣಿಕ ಸೇವೆಯನ್ನು ಮಾಡುವ ಮೂಲಕ ನಾಡಿನಲ್ಲಿ ಇಂದಿಗೂ ಸಹ ಪ್ರಸಿದ್ಧರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಉಪನ್ಯಾಸಕರಾಗಿ ಶಿವಮೊಗ್ಗದ ಭಾಸ್ಕರ ಆಚಾರ್ ಮತ್ತು ಸಮಾಜದ ಅಧ್ಯಕ್ಷ ಎಸ್. ರುದ್ರಚಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ಎಂ.ಆರ್. ಬಡಿಗೇರ, ರಾಜಾಚಾರ್, ಲಕ್ಷ್ಮಣಚಾರ್, ಪರಿಸರ ಪ್ರೇಮಿ ವೀರಾಚಾರಿ, ಲಕ್ಷ್ಮಿ ರಾಜಾಚಾರ್, ನೇತ್ರಾವತಿ ಪ್ಯಾಟಿ, ನಾಗರಾಜ್ ಆಚಾರ್, ಜನಾರ್ಧನ್ ಪ್ಯಾಟಿ, ಸುರೇಂದ್ರಚಾರ್ ಮತ್ತು ಇತರರು ಹಾಜರಿದ್ದರು.

## ಶಾಸಕ ಪರಮೇಶ್ವರ ನಾಯ್ಕ್ ಪುತ್ರ ಟಿ. ಭರತ್‌ಗೆ ಎರಡನೇ ಬಾರಿ ಗೆಲುವು



ಹರಪನಹಳ್ಳಿ, ಜ. 1- ಮಾಜಿ ಸಚಿವರೂ ಆದ ಹೂವಿನಹಡಗಲಿ ಶಾಸಕ ಪಿ.ಟಿ. ಪರಮೇಶ್ವರನಾಯ್ಕ್ ಪುತ್ರ ಪಿ.ಟಿ. ಭರತ್ ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮ ಪಂಚಾಯ್ತಿಗೆ ಸ್ಪರ್ಧಿಸಿ, ಸತತ ಎರಡನೇ ಬಾರಿ ಆಯ್ಕೆಯಾಗಿ ಸಾಮಾನ್ಯ ಕ್ಷೇತ್ರದಿಂದ ಅತೀ ಹೆಚ್ಚು ಮತಗಳನ್ನು ಪಡೆದು ಗೆದ್ದು ಬೀಗಿದರು.

ಕಳೆದ ಅವಧಿಯಲ್ಲಿ ಲಕ್ಷ್ಮೀಪುರ ಪಂಚಾಯ್ತಿಗೆ ಆಯ್ಕೆಯಾಗಿ ಅಧ್ಯಕ್ಷರೂ ಆಗಿದ್ದ ಪಿ.ಟಿ. ಭರತ್ ಈ ಬಾರಿ 729 ಮತಗಳನ್ನು ಪಡೆದು ಜಯಶಾಲಿಯಾಗಿದ್ದಾರೆ.

ಪಿ.ಟಿ. ಪರಮೇಶ್ವರನಾಯ್ಕ್ ಗ್ರಾಮ ಪಂಚಾಯ್ತಿಯಿಂದಲೇ ತಮ್ಮ ರಾಜಕೀಯ ಜೀವನ ಆರಂಭಿಸಿದ್ದರು. ಇದೀಗ ಪುತ್ರ ಅದೇ ಹಾದಿಯಲ್ಲಿ ಸಾಗಿದ್ದಾರೆ. ಈ ಸಂದರ್ಭದಲ್ಲಿ ಪಿ.ಎಲ್.ಡಿ. ಬ್ಯಾಂಕ್ ನಿರ್ದೇಶಕ ಪಿ.ಎಲ್. ಪೋಮ್ಯನಾಯ್ಕ ಹಾಗೂ ಇನ್ನಿತರರಿದ್ದರು.

## ಕಾಂಗ್ರೆಸ್ 17, ಬಿಜೆಪಿ 14 ರಲ್ಲಿ ಮೇಲುಗೈ

ಹರಪನಹಳ್ಳಿ, ಜ. 1- ತಾಲ್ಲೂಕಿನ 35 ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ 17 ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು 14 ಪಂಚಾಯ್ತಿಗಳಲ್ಲಿ ಮೇಲುಗೈ ಸಾಧಿಸಿದ್ದಾರೆ.

ಚಿಗಟೇರಿ, ಕೂಲಹಳ್ಳಿ, ಕಡತಿ, ಕೆ. ಕಲ್ಲಹಳ್ಳಿ, ತೊಗರಿಕಟ್ಟೆ, ಚಿರಸ್ತಹಳ್ಳಿ, ನಿಟ್ಟೂರು, ಮಾಡ್ಲಿಗೇರಿ, ಮೈದೂರು, ರಾಗಿಮಸಲವಾಡ, ಯಡಿಹಳ್ಳಿ, ಶಿಂಗ್ರಿಹಳ್ಳಿ, ನೀಲಗುಂದ, ಹಲುವಾಗಲು ಸೇರಿದಂತೆ ಇನ್ನೂ ಎರಡರಿಂದ ಮೂರು ಪಂಚಾಯ್ತಿಗಳಲ್ಲಿ ಬಿಜೆಪಿ ಬೆಂಬಲಿತರು ಅಧಿಕಾರ ನಡೆಸಲಿದ್ದಾರೆ ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್ ತಿಳಿಸಿದ್ದಾರೆ.

ನಂದಿಬೇವೂರು, ಲಕ್ಷ್ಮಿಪುರ, ಗುಂಡಗತ್ತಿ, ಚಿರಸ್ತಹಳ್ಳಿ, ನಿಚ್ಚವ್ವನಹಳ್ಳಿ, ಹಿರೇಮೇಗಳಗೇರಿ, ಬಾಗಳಿ, ಬೆಣ್ಣಿಹಳ್ಳಿ, ಮತ್ತಿಹಳ್ಳಿ, ಸಾಸ್ವಿಹಳ್ಳಿ, ಕುಂಚೂರು, ಕಡಬಗೇರಿ, ಅಡವಿಹಳ್ಳಿ, ಯಡಿಹಳ್ಳಿ, ತೆಲಗಿ, ದುಗ್ಗಾವತಿ, ತೊಗರಿಕಟ್ಟೆ ಬಾಗಳಿ ಗ್ರಾಮ ಪಂಚಾಯ್ತಿಗಳಲ್ಲಿ ಕಾಂಗ್ರೆಸ್ ಬೆಂಬಲಿತರು ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಹೆಚ್.ಕೆ. ಹಾಲೇಶ್ ತಿಳಿಸಿದ್ದಾರೆ.

ಜಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ 7 ಪಂಚಾಯ್ತಿಗಳಲ್ಲಿ 4 ಬಿಜೆಪಿ ಹಾಗೂ 3 ಕಾಂಗ್ರೆಸ್ ಬೆಂಬಲಿತರು ಜಯ ಗಳಿಸಿದ್ದಾರೆ.

## ಜಿಗಳಿ : ಸಂಭ್ರಮದ ಶಾಲಾ ಪ್ರಾರಂಭೋತ್ಸವ



ಮಲೇಬೆನ್ನೂರು, ಜ.1- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6, 7 ಮತ್ತು 8 ನೇ ತರಗತಿಗಳನ್ನು ಶುಕ್ರವಾರ ಸರ್ಕಾರದ ಆದೇಶದಂತೆ ನಿಯಮಗಳನ್ನು ಪಾಲಿಸಿ ಸಂಭ್ರಮದಿಂದ ಆರಂಭಿಸಲಾಯಿತು.

ಸತತ 7 ತಿಂಗಳ ನಂತರ ಪ್ರಾರಂಭವಾದ ಶಾಲೆಯ ತರಗತಿ ಕೊಠಡಿಗಳನ್ನು ಸ್ವಚ್ಛಗೊಳಿಸಿ, ಹಸಿರು ತೋರಣಗಳಿಂದ ಸಿಂಗಾರ ಮಾಡಲಾಗಿತ್ತು.

ಮೊದಲ ದಿನವಾದ ಇಂದು 3 ತರಗತಿಗಳಿಗೂ ಸೇರಿ ಒಟ್ಟು 40 ವಿದ್ಯಾರ್ಥಿಗಳು ಆಗಮಿಸಿದ್ದರು. ಆಶಾ ಕಾರ್ಯಕರ್ತೆಯರಾದ ವನಜಾಕ್ಷಮ್ಮ, ಮಂಜುಳಾ, ಲತಾ, ಶಂಕರಮ್ಮ ಅವರು ವಿದ್ಯಾರ್ಥಿಗಳಿಗೆ ಸ್ಯಾನಿಟೈಜ್ ಹಾಗೂ ಜ್ವರ ತಪಾಸಣೆ ಮಾಡಿ ತರಗತಿಗಳಿಗೆ ಕಳುಹಿಸಿಕೊಟ್ಟರು. ಎಲ್ಲಾ ವಿದ್ಯಾರ್ಥಿಗಳು ಮಾಸ್ಕ್ ಧರಿಸಿ ಶಾಲೆಗೆ ಆಗಮಿಸಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ, ಉಪಾಧ್ಯಕ್ಷೆ ರಶ್ಮಿ ವಿಜಯಭಾಸ್ಕರ್, ಸದಸ್ಯರಾದ ಕೆ. ಎಸ್. ಮಾಲತೇಶ್, ಡಿ.ಪಿ. ಚಿದಾನಂದ್, ಶಾಲೆಯ ಮುಖ್ಯ ಶಿಕ್ಷಕ ಕರಿಬಸಪ್ಪ, ಶಿಕ್ಷಕರಾದ ನಾಗೇಶ್, ಮಲ್ಲಿಕಾರ್ಜುನ್, ಲೋಕೇಶ್, ಗುಡ್ಡಪ್ಪ, ಲಿಂಗರಾಜ್, ಜಯಶ್ರೀ, ವೀಣಾ, ಗೀತಾ ಅವರುಗಳು ಹಾಜರಿದ್ದು, ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ ಸ್ವಾಗತಿಸಿದರು.

## ಹರಪನಹಳ್ಳಿ ತಾಲ್ಲೂಕಿನಲ್ಲಿ ಪ್ರಮುಖರ ಗೆಲುವು

ಹರಪನಹಳ್ಳಿ, ಜ. 1- ಹರಪನಹಳ್ಳಿ ತಾಲ್ಲೂಕಿ ನಲ್ಲಿ ನಡೆದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಈ ಕೆಳಕಂಡಂತೆ ಪ್ರಮುಖರು ಗೆಲುವು ಸಾಧಿಸಿದ್ದಾರೆ.

ಹೂವಿನ ಹಡಗಲಿ ಶಾಸಕ ಪಿ.ಟಿ. ಪರಮೇಶ್ವರನಾಯ್ಕ ಅವರ ಪುತ್ರ ಪಿ.ಟಿ.ಭರತ್ ಸತತ ಎರಡನೇ ಬಾರಿಗೆ ಲಕ್ಷ್ಮೀಪುರ ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ ನವರ ಪುತ್ರ ಬೇಲೂರು ಸಿದ್ದೇಶ್ ಹಾಗೂ ವಕೀಲ ಬಿ.ವಾಗೀಶ ನೀಲಗುಂದ ಗ್ರಾಮ ಪಂಚಾಯ್ತಿಗೆ ಆಯ್ಕೆಗೊಂಡಿದ್ದಾರೆ.

ತಾ.ಪಂ.ಮಾಜಿ ಅಧ್ಯಕ್ಷ ಎಲ್. ಹನುಮಂತಪ್ಪ ಹಿರೇಮೇಗಳಗೇರಿ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಕಣಿವಿಹಳ್ಳಿ ಗ್ರಾಮದಿಂದ ನ್ಯೂಟ್ರಿಷಿಯನ್ ಕೋಚ್ ಕೆ. ಲಕ್ಷ್ಮಿ ನಂದಿಬೇವೂರು ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಮಾಡ್ಲಗೇರಿ ತಾಂಡಾದಿಂದ ಬಿಜೆಪಿ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷ ಎಂ.ಪಿ. ನಾಯ್ಕ ಸಹೋದರ ಹಾಲೇಶನಾಯ್ಕ ಆಯ್ಕೆಯಾಗಿದ್ದಾರೆ.

**ಪತಿಗೆ ಸೋಲು, ಪತ್ನಿಗೆ ಗೆಲುವು:** ಪತಿ ಪಿ.ಟಿ. ಶಿವಾಜಿನಾಯ್ಕ ಅವರು ಲಕ್ಷ್ಮೀಪುರ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಸೋಲುಂಡರೆ, ಪತ್ನಿ ಕುಮಾರಿ ಅವರು ಅದೇ ಪಂಚಾಯ್ತಿ ವ್ಯಾಪ್ತಿಯ ಸತ್ತೂರು ಗೊಲ್ಲರಹಟ್ಟಿ ಕ್ಷೇತ್ರದಿಂದ ಗೆಲುವು ಸಾಧಿಸಿದ್ದಾರೆ.

## ಶ್ಯಾಬನೂರಿನಲ್ಲಿ ಇಂದು ಮಾಲಸಾಂಭ ಗಂಗಮಾಳಮ್ಮ ದೇವಿ ಕಾರ್ತಿಕೋತ್ಸವ



ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ಶ್ಯಾಬನೂ ರಿನ ಶ್ರೀ ಮಾಲಸಾಂಬಾ ಗಂಗ ಮಾಳಮ್ಮ ದೇವಿಯ ಕಡೆ ಕಾರ್ತಿಕೋತ್ಸವ ಮತ್ತು ಬಾಳೆದಿಂಡಿನ ಕದಲಿ ಪೂಜೆ ನಡೆಯಲಿದೆ.

## ರಾಜನಹಳ್ಳಿ ಜಾಕ್‌ವೆಲ್ ಸೇತುವೆ ಬಳಿ ರಸ್ತೆ ಅಪಘಾತದಲ್ಲಿ ದಂಪತಿ ಸಾವು




ಹರಿಹರ, ಜ.1- ನಗರದ ಹೊರವಲಯದ ರಾಜನಹಳ್ಳಿ ಜಾಕ್‌ವೆಲ್ ಹತ್ತಿರದ ಸೇತುವೆಯ ಬಳಿ ಲಾರಿ ಮತ್ತು ಬೈಕ್‌ಗೆ ಡಿಕ್ಕಿ ಸಂಭವಿಸಿದ ಪರಿಣಾಮವಾಗಿ ರಾಣೇಬೆನ್ನೂರು ತಾಲ್ಲೂಕಿನ ಒಡೆಯರಾಯನಹಳ್ಳಿ ಗ್ರಾಮದ ಹಾಲಪ್ಪ ಉಜ್ಜನಗೌಡ್ರು ಮತ್ತು ಅವರ ಪತ್ನಿ ಸಿದ್ದಮ್ಮ ಮೃತಪಟ್ಟಿದ್ದಾರೆ.

ಸೇತುವೆಯ ಮೇಲೆ ಒಡೆಯರಾಯನಹಳ್ಳಿ ಗ್ರಾಮದ ಹಾಲಪ್ಪ ತಮ್ಮ ಪತ್ನಿ ಜೊತೆಯಲ್ಲಿ ಆನಗೋಡು ಗ್ರಾಮದ ಅಂಗಡಿಗೆ ಎಳನೀರು ಹಾಕಿ ವಾಪಸ್ ತಮ್ಮ ಹಳ್ಳಿಗೆ ತೆರಳುವಾಗ ರಾಜನಹಳ್ಳಿ ಹತ್ತಿರದ ಜಾಕ್‌ವೆಲ್ ಬಳಿ ಇರುವ ಸೇತುವೆಯ ಮೇಲೆ ತಮಿಳುನಾಡಿನ ಟಿಎನ್ 88-ಬಿ4645 ಸಂಖ್ಯೆಯ ಲಾರಿ ಹಿಂದಿನಿಂದ ಬಂದ ಕೆಎ17 ಎಎಫ್ 2640 ಸಂಖ್ಯೆಯ ಬೈಕ್‌ಗೆ ಡಿಕ್ಕಿ ಹೊಡೆದಾಗ, ಹಿಂದೆ ಇದ್ದ ಪತ್ನಿ ಸಿದ್ದಮ್ಮ ಸೇತುವೆಯ ಮೇಲಿನಿಂದ ಕೆಳಕ್ಕೆ ಬಿದ್ದು ಮೃತಪಟ್ಟಿದ್ದಾರೆ. ಪತಿ ಹಾಲಪ್ಪ ಹರಿಹರದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸುವ ಮಧ್ಯೆ ಕೊನೆಯುಸಿರೆಳೆದಿದ್ದಾರೆ.

ಸ್ಥಳಕ್ಕೆ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಡಿ. ರವಿಕುಮಾರ್ ಭೇಟಿ ನೀಡಿ ಲಾರಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರಕರಣ ಗುತ್ತೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.


॥ ಶ್ರೀ ಉಜ್ಜಯಿನಿ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ ವಾಸಿ ಶ್ರೀಮತಿ ಕರಿಬಸಮ್ಮ ಜಿ. ಮತ್ತು ಮಕ್ಕಳು ಇವರು ಮಾಡಿವ ವಿಜ್ಞಾಪನೆಗಳು. ದಿನಾಂಕ 26.12.2020ನೇ ಶನಿವಾರ ಬೆಳಗಿನ ಜಾವ 4 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಜೆ.ವಿಶ್ವನಾಥಯ್ಯ**

(ನಿವೃತ್ತ ಲೆಕ್ಕಪರಿಶೋಧಕರು)

ಇವರು ದೈವಾಧೀನರಾದ ಕಾರಣ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ 03.01.2021ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ತ್ರಿಮೂರ್ತಿ ನಿಲಯ, ಡಿ.ಸಿ.ಎಂ. ಟೌನ್ ಶಿಪ್, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು:**

ಪತ್ನಿ : ಶ್ರೀಮತಿ ಕರಿಬಸಮ್ಮ ಜಿ. ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು. 99007 56796

ವಿ.ಸೂ: ಆಹ್ವಾನ ಪತ್ರಿಕೆ ತಲುಪದೆ ಇರುವವರು ಇದ್ದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.


**ಶ್ರೀಮತಿ ಅಕ್ಕಮ್ಮ ಕುಂಬಾರ್ ನಿಧನ**



ದಾವಣಗೆರೆ ಭಾರತ್ ಕಾಲೋನಿಯ ಕುಂಬಾರ್ ಓಣಿ ವಾಸಿ ದಿ. ಕೆ.ಬಿ. ತಿಪ್ಪೇಸ್ವಾಮಿಯವರ ಧರ್ಮಪತ್ನಿ ಶ್ರೀಮತಿ ಅಕ್ಕಮ್ಮ (68) ಅವರು ದಿನಾಂಕ 1.01.2021 ನೇ ಶುಕ್ರವಾರ ರಾತ್ರಿ 10.05 ಕ್ಕೆ ನಿಧನರಾದರು. ನಾಲ್ವರು ಪುತ್ರಿಯರು, ಇಬ್ಬರು ಪುತ್ರರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.01.2021ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಅರೇಮಲ್ಲಾಪುರ ಗ್ರಾ.ಪಂ.ನಲ್ಲಿ ಕಾಂಗ್ರೆಸ್ ಬೆಂಬಲಿಗರು ಬಿಜೆಪಿಗೆ

## ರಾಣೇಬೆನ್ನೂರು ಶಾಸಕ ಅರುಣಕುಮಾರ ಪೂಜಾರ

ರಾಣೇಬೆನ್ನೂರು, ಜ.1- ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಅರಿತು ಅರೇಮಲ್ಲಾಪುರ ಗ್ರಾ.ಪಂ.ನ 8 ಜನ ಕಾಂಗ್ರೆಸ್ ಬೆಂಬಲಿತ ಸದಸ್ಯರು ಬಿಜೆಪಿಗೆ ಬರುತ್ತಿದ್ದಾರೆ ಎಂದು ಶಾಸಕ ಅರುಣಕುಮಾರ್ ಪೂಜಾರ ತಮ್ಮ ನಿವಾಸದಲ್ಲಿ ಕರೆದಿದ್ದ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಬರುವ 23 ಗ್ರಾ.ಪಂ.ಗಳಲ್ಲಿ 21ರಲ್ಲಿ ಬಿಜೆಪಿ ಆಡಳಿತ ನಡೆಯಲಿದೆ. ತಲಾ ಒಂದು ಕೋಟಿ ವಿಶೇಷ ಅನುದಾನಕ್ಕಾಗಿ ಮುಖ್ಯ ಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಲ್ಲಿ ಮಾತನಾಡಿ, ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಗಮನಹರಿಸುತ್ತೇನೆ ಎಂದರು.

ಕೆಲ ತಿಂಗಳುಗಳಲ್ಲಿ ಬರಲಿರುವ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿಗಳ ಚುನಾವಣೆಗೆ ನಮ್ಮ ಪಕ್ಷದ ಕಾರ್ಯಕರ್ತರು ಈಗಾಗಲೇ ಸಿದ್ದತೆ ನಡೆಸಿದ್ದಾರೆ. ವಿಧಾನಸಭೆ ಕ್ಷೇತ್ರದಲ್ಲಿ ಬರುವ 4 ಜಿಲ್ಲಾ ಹಾಗೂ 23 ತಾಲ್ಲೂಕು ಪಂಚಾಯ್ತಿಗಳೆಲ್ಲವು ಬಿಜೆಪಿ ಪಾಲಾಗಲಿವೆ ಎಂದು ಶಾಸಕರು ವಿಶ್ವಾಸ ವ್ಯಕ್ತಪಡಿಸಿದರು.

**ಪಕ್ಷದಲ್ಲಿ ಒಡಕಿಲ್ಲ :** ಪಕ್ಷದಲ್ಲಿ ಒಡಕಿಲ್ಲ, ಜನತೆ ಯುವಕನಿಗೆ ಶಾಸಕತ್ವ ನೀಡಿದೆ. ಹಾಗಾಗಿ ಯುವ ಶಕ್ತಿ ಜನಸೇವೆ ಮಾಡುವ ಕನಸು ಹೊತ್ತಿದೆ. ಅದು ಅಧಿಕಾರಕ್ಕಾಗಿ ಪ್ರಯತ್ನಿಸುತ್ತಿದೆ. ಹರನಗಿರಿ ಹಾಗೂ ಚೌಡಯ್ಯದಾನಾಪುರದಲ್ಲಿ ಮಾತ್ರ ಭಿನ್ನತೆ ಬಂದಿತ್ತು. ಅದು ಸರಿಯಾಗುತ್ತದೆ. ನಮ್ಮಲ್ಲಿ ವೈಮನಸ್ಸು ಇಲ್ಲ. ನಮ್ಮದು ಸಾಮೂಹಿಕ ನಾಯಕತ್ವ. ಈಗ ಹದಿನಾರು ಇಲ್ಲ ಒಂದಾಗಿದೆ ಎಂದು ಜೊತೆಗಿರುವ ಕಾಯಂ ಮುಖಂಡರನ್ನು ತೋರಿಸಿ ಶಾಸಕರು ನಗೆ ಬೀರಿದರು.

ಸಂತೋಷ್ ಪಾಟೀಲ, ಎಸ್.ಎಸ್. ರಾಮಲಿಂಗಣ್ಣನವರ, ಚೋಳಪ್ಪ ಕಸವಾಳ, ಸಿದ್ದು ಚಿಕ್ಕಬಿದರಿ, ದೀಪಕ್ ಹರಪನಹಳ್ಳಿ, ಬಸವರಾಜ ಹುಲ್ಲತ್ತಿ, ಮಂಜುನಾಥ ಓಲೇಕಾರ ಮತ್ತಿತರರಿದ್ದರು.

# ಅರ್ಹರಿಗೆ ಮನೆಗಳನ್ನು ನೀಡಬೇಕು

## ಸಂಬಂಧಿಸಿದ ಅಧಿಕಾರಿಗಳಿಗೆ ಶಾಸಕ ಕರುಣಾಕರ ರೆಡ್ಡಿ ನಿರ್ದೇಶನ



ಹರಪನಹಳ್ಳಿ, ಜ.1- ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಈ ಕ್ಷೇತ್ರದಲ್ಲಿ 10 ಸಾವಿರ ಅರ್ಜಿಗಳು ಬಂದಿದ್ದು, ಶೀಘ್ರವೇ ಮನೆಗಳು ಮಂಜೂರಾಗುತ್ತವೆ. ಮಂಜೂರಾದ ಮನೆಗಳನ್ನು ಅರ್ಹರಿಗೆ ನೀಡಬೇಕು ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ನೂತನ ಬಿಜೆಪಿ ಬೆಂಬಲಿತ ಗ್ರಾ.ಪಂ. ಸದಸ್ಯರಿಗೆ ಹೇಳಿದರು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಬಿಜೆಪಿ ಮಂಡಲ ವತಿಯಿಂದ ಆಯೋಜಿಸಿದ್ದ ಬಿಜೆಪಿ ಬೆಂಬಲಿತ ಗ್ರಾ.ಪಂ. ಸದಸ್ಯರ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದಾರೆ. ಯಾವುದೇ ಮೀಸಲಾತಿ ಬಂದರೂ ಒಗ್ಗಟ್ಟಿನಿಂದ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯಾಗಬೇಕು. ಒಳ್ಳೆಯ ಆಡಳಿತ ನೀಡಬೇಕು ಎಂದು ಹೇಳಿದರು.

ಬಿಜೆಪಿ ಮಾಜಿ ಅಧ್ಯಕ್ಷ ಎಂ.ಪಿ. ನಾಯಕ್, ಬಿಜೆಪಿ ಮುಖಂಡ ಬಾಗಳಿ ಕೊಟ್ರೇಶಪ್ಪ ಮಾತನಾಡಿದರು. ಬಿಜೆಪಿ ಮಂಡಲ ಅಧ್ಯಕ್ಷ ಸತ್ತೂರು ಹಾಲೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಿಜೆಪಿ ಎಸ್ಟಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಆರ್. ಲೋಕೇಶ್, ಡಾ. ಮಲ್ಕಪ್ಪ ಅಧಿಕಾರ, ರಾಘವೇಂದ್ರ ಶೆಟ್ಟಿ, ಲತಾ ನಾಗರಾಜ, ನಿಟ್ಟೂರು ಸಣ್ಣಹಾಲಪ್ಪ, ಬಸವರಾಜ, ಯುವ ಮುಖಂಡ ಶಿರಗಾನಹಳ್ಳಿ ಬಿ. ವಿಶ್ವನಾಥ, ಯು.ಪಿ. ನಾಗರಾಜ, ಎಂ. ಸಂತೋಷ ಇನ್ನಿತರರಿದ್ದರು.

# ಅಂಚೆ ನೌಕರರ ಕ್ರಿಕೆಟ್ ಲೀಗ್ ಟೂರ್ನ್‌ಮೆಂಟ್



ದಾವಣಗೆರೆ, ಜ.1- ಅಂಚೆ ನೌಕರರ ಕ್ರಿಕೆಟ್ ಲೀಗ್ ಟೂರ್ನ್‌ಮೆಂಟ್ ಅನ್ನು ಶುಕ್ರವಾರ ಆಯೋಜಿಸಲಾಗಿತ್ತು. ಅಂಚೆ ಅಧೀಕ್ಷಕ ವಿರೂಪಾಕ್ಷಪ್ಪ ಕ್ರಿಕೆಟ್ ಆಡುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು. ಐಎಸ್‌ಪಿ ಹಾಗೂ ಐಪಿ ಸರ್ ಹಾಗೂ ದಾವಣಗೆರೆಯ ಅಂಚೆ ಕಚೇರಿ ನೌಕರರು ಭಾಗವಹಿಸಿದ್ದರು. ಒಟ್ಟು ಮೂರು ತಂಡಗಳು ಭಾಗವಹಿಸಿದ್ದು, 4 ಪಂದ್ಯಾವಳಿಗಳು ಜರುಗಿದವು. ಅಂತಿಮ ದಾವಣಗೆರೆ ಹೆಚ್‌ಓಎಂಐಎಸ್ ತಂಡವು ಜಯ ಗಳಿಸಿತು.

# ಕಾರ್ಮಿಕ ವರ್ಗದ ಹಕ್ಕುಗಳನ್ನು ರಕ್ಷಿಸುವಂತೆ ಆಗ್ರಹ

## ನಗರದಲ್ಲಿ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ




ದಾವಣಗೆರೆ, ಜ.1- ಸರ್ಕಾರದ ರೈತ ವಿರೋಧಿ ಮತ್ತು ಕಾರ್ಮಿಕ ವಿರೋಧಿ ಕಾಯಿದೆಗಳ ವಿರುದ್ಧ ಹೊಸ ವರ್ಷವಾದ ಇಂದು ನಗರದಲ್ಲಿ ಹೋರಾಟದ ಧ್ವನಿ ಕೇಳಿ ಬಂತು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿ.ಐ.ಟಿ.ಯು.) ನ ಜಿಲ್ಲಾ ಸಮಿತಿ ಪದಾಧಿಕಾರಿಗಳು, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾ, ರೈತ ಮತ್ತು ಕಾರ್ಮಿಕ ತಿದ್ದುಪಡಿ ಕಾಯಿದೆಗಳ ಪ್ರತಿಗಳನ್ನು ಹರಿದು ಹಾಕುವ ಮೂಲಕ ಹೊಸ ವರ್ಷದ ದಿನವನ್ನು ಸ್ವಾಗತಿಸಿದರು. ಅಲ್ಲದೇ ಕಾರ್ಮಿಕ ಹಕ್ಕುಗಳನ್ನು ಉಳಿಸುರ್ತೇವೆ, ರೈತರ ಬದುಕನ್ನು ರಕ್ಷಿಸುತ್ತೇವೆ, ಕಾರ್ಪೊರೇಟ್ ಹಿಡಿತದಿಂದ ದೇಶವನ್ನು ಕಾಪಾಡುತ್ತೇವೆ ಎಂಬ ಪ್ರತಿಜ್ಞೆ ಮಾಡಿದರು.

ಎಲ್ಲಾ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು. ಮೂರು ಕೃಷಿ ಕಾನೂನುಗಳನ್ನು ವಾಪಸ್ ಪಡೆಯಬೇಕು. ವಿದ್ಯುತ್ ಮಸೂದೆ 2020 ನ್ನು ಹಿಂದಕ್ಕೆ ಪಡೆಯಬೇಕು. ಎಲ್ಲಾ ರೀತಿಯ ಖಾಸಗೀಕರಣವನ್ನು ಕೂಡಲೇ ನಿಲ್ಲಿಸಬೇಕು. ಆದಾಯ ತೆರಿಗೆಯ ಮಿತಿಯಿಂದ ಹೊರಗಿರುವ ಎಲ್ಲಾ ಕುಟುಂಬಗಳಿಗೂ ಮಾಸಿಕ 7,500 ರೂ. ನಗದು ವರ್ಗಾವಣೆ ಮಾಡಬೇಕು. ಬಡವರಿಗೆ ಪ್ರತಿಯೊಬ್ಬರಿಗೂ ಪ್ರತಿ ತಿಂಗಳು 10 ಕೆ.ಜಿ. ಆಹಾರ ಧಾನ್ಯಗಳನ್ನು ಉಚಿತವಾಗಿ ನೀಡಬೇಕು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ವಾರ್ಷಿಕ 200 ದಿನಗಳ ಕೆಲಸ ಮತ್ತು ದಿನಕ್ಕೆ 700 ರೂ. ಕೂಲಿ ನೀಡಬೇಕು, ನಗರ ಪ್ರದೇಶಗಳಿಗೂ ಈ ಯೋಜನೆಯನ್ನು ವಿಸ್ತರಿಸಬೇಕು. ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ಹಳೆ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳನ್ನು ವಿಸ್ತರಿಸಬೇಕು. ಉಚಿತ ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು ಎಲ್ಲರಿಗೂ ಜಾರಿಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜು, ಗ್ರಾಮ ಪಂಚಾಯ್ತಿ ನೌಕರರ ಸಂಘದ ರಾಜ್ಯ ನಾಯಕರಾದ ಉಮೇಶ್ ಕೈದಾಳೆ, ಗುಡಾಳ್ ತಿಪ್ಪೇಸ್ವಾಮಿ ಹಾಗೂ ಕಟ್ಟಡ ಕಾರ್ಮಿಕರ ಸಂಘದ ನಾಯಕರಾದ ಹೊನ್ನೂರು ತಿಮ್ಮಣ್ಣ, ಗುಡ್ಡಪ್ಪ ಎ, ವಸತಿಯುತ ಹಾಸ್ಟೆಲ್ ಗುತ್ತಿಗೆ ನೌಕರರ ಸಂಘದ ನಾಯಕರಾದ ಸುರೇಶ್, ರವಿಕುಮಾರ್, ಬೇತೂರು ಬಸವರಾಜ್ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಉಜಿರೆಯಲ್ಲಿ ಪಾಕಿಸ್ತಾನ ಪರ ಘೋಷಣೆಗೆ ಖಂಡನೆ

# ಬಿಜೆಪಿ ದಕ್ಷಿಣ ಯುವ ಮೋರ್ಚಾ ಪ್ರತಿಭಟನೆ




ದಾವಣಗೆರೆ, ಜ.1- ಉಜಿರೆಯಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ದೇಶ ದ್ರೋಹಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಎಸ್‌ಡಿಪಿಐ ಮತ್ತು ಪಿಎಫ್ ಐ ಸಂಘಟನೆಗಳನ್ನು ನಿಷೇಧಿಸಬೇಕೆಂದು ಆಗ್ರಹಿಸಿ ಜಿಲ್ಲಾ ಬಿಜೆಪಿ ದಕ್ಷಿಣ ಯುವ ಮೋರ್ಚಾ ಕಾರ್ಯಕರ್ತರು ನಗರದಲ್ಲಿಂದು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಉಜಿರೆಯಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಫಲಿತಾಂಶದ ವೇಳೆ ಮತ ಎಣಿಕೆ ಕೇಂದ್ರದ ಎದುರು ಡಿ.30ರಂದು ನಡೆದ ವಿಜಯೋತ್ಸವದಲ್ಲಿ ಎಸ್‌ಡಿಪಿಐ ಕಾರ್ಯಕರ್ತರು ಪಾಕಿಸ್ತಾನದ ಪರವಾಗಿ ಘೋಷಣೆ ಕೂಗಿ ದೇಶ ದ್ರೋಹದ ಕೃತ್ಯ ಎಸಗಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೇ, ಇಂತಹ ದೇಶ ದ್ರೋಹಿಗಳಿಗೆ ಜೀವಾವಧಿ ಶಿಕ್ಷೆ ಅಥವಾ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ರಾಜ್ಯದ ಶಾಂತಿ, ಸುವ್ಯವಸ್ಥೆ ಕದಡಲು ಸಮಾಜಘಾತುಕ ಶಕ್ತಿಗಳು ಪ್ರಯತ್ನಿಸುತ್ತಿವೆ. ಈ ಘಟನೆಗೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣವಾಗಿರುವವರನ್ನು ತನಿಖೆಗೆ ಒಳಪಡಿಸಬೇಕು. ಡಿಜೆ ಹಳ್ಳಿ, ಕೆಜಿ ಹಳ್ಳಿ ಗಲಭೆಯಲ್ಲಿ ಪಿಎಫ್ ಐ ಮತ್ತು ಎಸ್ ಡಿಪಿಐ ಸಂಘಟನೆಯ ಪದಾಧಿಕಾರಿಗಳೇ ನೇರ ರೂವಾರಿಗಳಾಗಿದ್ದು, ಮಂಗಳೂರಿನ ಕೋಮು ಗಲಭೆಯಲ್ಲೂ ನೇರ ಕಾರಣರಾಗಿದ್ದಾರೆ. ಪದೇ ಪದೇ ಇಂತಹ ಘಟನೆಗಳು ಮರುಕಳಿಸಲು ಕಾರಣವಾಗಿರುವ ಈ ಸಂಘಟನೆಯನ್ನು ನಿಷೇಧಿಸಿ, ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ದಕ್ಷಿಣ ಕ್ಷೇತ್ರದ ಮುಖಂಡರಾದ ತರಕಾರಿ ಶಿವು, ಪ್ರವೀಣ್ ಜಾಧವ್, ಸೋಗಿ ಗುರುಶಾಂತ್, ರಾಜು ನೀಲಗುಂದ, ಗಣೇಶ್, ಅನಿಲ್, ಮಂಜು, ಮಾಲತೇಶ್, ಪ್ರದೀಪ್, ಸಂದೇಶ್, ಸಚಿನ್, ಅಭಿ, ನಂದೀಶ್, ಹರೀಶ್ ಶಾಮನೂರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಅಂತು ಬಂತು ಕೋವಿಡ್ ಲಸಿಕೆ

ಅಂತು ಇಂತು ಬಂದೇ ಬಂತು ಕೋವಿಡ್ ಲಸಿಕೆ
ಅಂತು ಬಂತು ಜನರ ಮನದಿ ನೆಮ್ಮದಿ ಹೊದಿಕೆ
ನಿಂತೇ ಬಿಟ್ಟಿತು ರೋಗವೆಂಬ ಆತುರ ಬೇಡ
ಅಂತರ ,ಕವಚ ಬಿಡುವ ಅವಸರ ಬೇಡ

ಸ್ವಚ್ಛತೆ ಕಟ್ಟೆಚ್ಚರ ನಡೆಯುತಲಿರಲಿ
ಸ್ವೇಚ್ಛ ಓಡಾಟಕೆ ಕಡಿವಾಣವಿರಲಿ
ಇಚ್ಛಾಶಕ್ತಿಯಿಂದ ರೋಗನಾಶವಾಗಲಿ
ಹೆಚ್ಚು ಆನಂದ ನೆಮ್ಮದಿ ಜಗಕೆ ಸಿಗಲಿ

ಸರದಿಗಾಗಿ ಕಾಯಲಿ ಸೇರದೆ ಗುಂಪಲಿ
ಬರುವುದು ಎಲ್ಲರಿಗೂ ಸಹನೆ ಇರಲಿ
ತರಲಿ ಆರೋಗ್ಯ ಹೊಸವರುಷ ಹೊಳೆಯಲಿ
ಬರಲಿ ಉನ್ನತಿಯು ದೇಶ ಬೆಳೆಯಲಿ

ಬಾಯಾರಿದ ಮನುಜಗೆ ಶುದ್ಧ ಜಲಸಿಕ್ಕಂತೆ
ತಾಯಾಗದ ಹೆಣ್ಣಿಗೆ ತಾಯ್ತನ ಬಂದಂತೆ
ಭಯದ ಕತ್ತಲಲಿ ಧೈರ್ಯದ ದೀಪದಂತೆ
ನಯವಾಗಿ ಬಂದಿದೆ ಲಸಿಕೆ ಅಮೃತದಂತೆ

ಕಷ್ಟ ಪಟ್ಟ ವಿಜ್ಞಾನಿಗೆ ಕೃತಜ್ಞರಾಗುವ
ಶ್ರೇಷ್ಠ ವೈದ್ಯ ದಾದಿಯರಿಗೆ ಬಾಗಿ ನಮಿಸುವ
ವಿಶಿಷ್ಟ ಜೀವನದಲ್ಲಿ ನೆರವಾಗಿ ಬಾಳುವ
ವಿಶೇಷ ಕೃಪೆಗೆ ಸಿರಿಹರಿಯ ಕೊಂಡಾಡುವ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್


# ಜಿಲ್ಲಾ ರೋಲರ್ ಸ್ಕೇಟಿಂಗ್ ಸ್ಪರ್ಧೆಗಳು

ದಾವಣಗೆರೆ, ಜ.1- ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ 20ನೇ ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್ ಆಯ್ಕೆ ಸ್ಪರ್ಧೆಗಳು ಈ ತಿಂಗಳ ಮೂರನೇ ವಾರದಲ್ಲಿ ನಗರದಲ್ಲಿ ನಡೆಯಲಿವೆ ಮತ್ತು ಆಯ್ಕೆಯಾದ ಸ್ಕೇಟರ್‌ಗಳು ಫೆಬ್ರವರಿ 2021ರಂದು ನಡೆಯಲಿರುವ 36ನೇ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಲಿದ್ದಾರೆ.

58ನೇ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್ ಪಂದ್ಯಗಳು ಮಾರ್ಚ್ 31, 2021 ರಿಂದ ಏಪ್ರಿಲ್ 10, 2021ರ ವರೆಗೆ ಚಂಡೀಗಢ ಮೊಹಾಲಿ ಪಟಿಯಾಲದಲ್ಲಿ ಜರುಗಲಿವೆ.

ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್‌ಗೆ ಆಯ್ಕೆ ಬಯಸುವ ಸ್ಕೇಟರ್‌ಗಳು ಇದೇ ದಿನಾಂಕ 10ರೊಳಗಾಗಿ www.indiaskate.com ನಲ್ಲಿ ನೋಂದಾಯಿಸಿಕೊಳ್ಳಬಹುದು ಅಥವಾ ಮೊಬೈಲ್ ಸಂಖ್ಯೆ 98441 13656ಗೆ ಕರೆ ಮಾಡಿ, ಹೆಚ್ಚಿನ ಮಾಹಿತಿ ಪಡೆಯಬಹುದು.

# ಸೇವೆ ಗುರುತಿಸಿ ಬೆಂಬಲಿಸಿದ್ದಾರೆ : ಸಂತೋಷ ಭಟ್


ರಾಣೇಬೆನ್ನೂರು

ರಾಣೇಬೆನ್ನೂರು, ಜ.1- ನನ್ನ ಸೇವೆಗೆ ಜನ ಬೆಂಬಲ ನೀಡಿದ್ದಾರೆ ಎಂದು ದೇವರಗುಡ್ಡದ ಪ್ರಧಾನ ಅರ್ಚಕ ಸಂತೋಷ ಭಟ್ ಹೇಳಿದರು. ಅವರು ತಮ್ಮ ಸಂಘಟನೆಯಿಂದ ಜಯ ಗಳಿಸಿದ ಸದಸ್ಯರನ್ನು ಸನ್ಮಾನಿಸಿ ಮಾತನಾಡಿದರು.

ಕಳೆದ ನಲವತ್ತು ವರ್ಷಗಳಿಂದ ರಾಷ್ಟ್ರೀಯ ಪಕ್ಷಗಳ ಆಡಳಿತಕ್ಕೆ ಬೇಸತ್ತ ಇಲ್ಲಿನ ಜನರು, ಕಳೆದ ನಾಲ್ಕಾರು ತಿಂಗಳ ನನ್ನ ಸೇವೆ ಗುರುತಿಸಿ ನಮ್ಮ ಊರು, ನಮ್ಮ ಗುರಿ ಸಂಘಟನೆಯ ಜೊತೆ ನಿಂತಿದ್ದಾರೆ ಎಂದರು. ಮುನಿರತ್ನ ಅವರು ನನಗೆ ಗಾಡ್ ಫಾದರ್. ಆದರೆ, ರಾಣೇಬೆನ್ನೂರು ಶಾಸಕ ನನ್ನ ಬೆನ್ನೆಲುಬು. ರಾಜಕೀಯದ ಯಾವ ಅಧಿಕಾರದ ಆಕಾಂಕ್ಷೆ ನನಗಿಲ್ಲ. ಕೇವಲ ಈ ಗ್ರಾಮದ, ಈ ಕ್ಷೇತ್ರದ ಅಭಿವೃದ್ಧಿ ನನ್ನ ಗುರಿ. ಅದಕ್ಕಾಗಿ ಬ್ಯಾಡಗಿ ಶಾಸಕರ ಸಹಕಾರ ಕೋರುತ್ತೇನೆ ಎಂದು ಸಂತೋಷ ಭಟ್ ಹೇಳಿದರು.

# 'ಸಾವಾಸ' ಅಲ್ಬಂ ಚಿತ್ರೀಕರಣ



ದಾವಣಗೆರೆ, ಜ.1- ಶಿವಗಂಗಾ ಬಸವರಾಜು ಅಂಡ್ ಬ್ರಾಂಡ್ ಸ್ಟುಡಿಯೋ ನಿರ್ಮಾಣದ 'ಸಾವಾಸ' ಮ್ಯೂಜಿಕ್ ಅಲ್ಬಂನ ಚಿತ್ರೀಕರಣದ ಮುಹೂರ್ತ ನಿನ್ನೆ ನಡೆಯಿತು. ನಗರದ ಲಕ್ಷ್ಮಿ ಫ್ಲೋರ್ ಮಿಲ್ ಸಮೀಪದ ಗಣೇಶನ ದೇವಾಲಯದಲ್ಲಿ ದೇವರಿಗೆ ಪೂಜೆ ಸಲ್ಲಿಸುವುದರ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಲಾಯಿತು.

ಬೆಂಗಳೂರು, ಮೈಸೂರಿನಲ್ಲಿ ಹಾಡುಗಳಿಗೆ ಸ್ಥಳ ಯೋಗ್ಯ ಎಂದು ಹೇಳಲಾಗುತ್ತದೆ. ಹೀಗಿರುವಾಗ, ದಾವಣಗೆರೆ ನಗರದಲ್ಲಿ ಮ್ಯೂಜಿಕ್ ಅಲ್ಬಂನ ಚಿತ್ರೀಕರಣ ನಡೆಸಲಾಗುತ್ತಿದೆ. ಆರು ಲಕ್ಷಕ್ಕೂ ಹೆಚ್ಚು ಬಂಡವಾಳ ಹಾಕಿದ್ದು, ನಮ್ಮವರೇ ಆದ ಅಖಿಲೇಶ್ ಕೋಗುಂಡಿ ನಿರ್ದೇಶನದಲ್ಲಿ ಈ ಅಲ್ಬಂ ಮಾಡಲಾಗುತ್ತಿದೆ. ಈ ಅಲ್ಬಂ ಜನರ ಮೆಚ್ಚಿಗೆ ಗಳಿಸಲಿದೆ ಎಂದು ನಿರ್ಮಾಪಕ ಶಿವಗಂಗಾ ಬಸವರಾಜ್ ಪತ್ರಕರ್ತರಿಗೆ ತಿಳಿಸಿದರು.

ನಿರ್ದೇಶಕ ಅಖಿಲೇಶ್ ಕೋಗುಂಡಿ ಮಾತನಾಡಿ, ಈ ಅಲ್ಬಂನಲ್ಲಿ ಉತ್ತಮ ಸಾಹಿತ್ಯ ಇದ್ದು, ಯುವಕ-ಯುವತಿಯರಿಗೆ ಮನರಂಜನೆ ನೀಡಲಿದೆ. ರಾಹುಲ್ ರ್‍ಯಾಂಪರ್ ಆಗಿದ್ದು, ಬಿಗ್ ಬಾಸ್ ಖ್ಯಾತಿಯ ಶ್ರುತಿ ಪ್ರಕಾಶ್ ಮತ್ತಿತರರು ಚಿತ್ರೀಕರಣದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಈ ಅಲ್ಬಂನ ಯೋಜನೆ ವಿನ್ಯಾಸವನ್ನು ಹಾಲೇಶ್ ಲಿಕಿತ್, ಜುದಾ ಸ್ಯಾಂಡಿ ಸಂಗೀತ, ಸಿಡ್ ಕೆ.ಜೆ. ಮತ್ತು ವಿಶು ಕ್ರೇನಿ ನೃತ್ಯ ಸಂಯೋಜನೆ ಮಾಡಲಿದ್ದಾರೆ ಎಂದರು.

ರಾಹುಲ್ ಮಾತನಾಡಿ, ಕಳೆದ ಆರು ತಿಂಗಳಿನಿಂದ ಈ ಅಲ್ಬಂನ ಬಗ್ಗೆ ಚರ್ಚೆಗಳು ನಡೆದಿದ್ದು, ಈಗ ಚಿತ್ರೀಕರಣವಾಗುತ್ತಿದೆ. ಹುಡುಗ-ಹುಡುಗಿಯರನ್ನು ಮನಸ್ಸಿನಲ್ಲಿಟ್ಟುಕೊಂಡು ಹಾಡು ಬರೆಯಲಾಗಿದೆ. ಇದು ನನ್ನ 10ನೇ ಹಾಡಾಗಿದೆ ಎಂದರು.

ಈಗಾಗಲೇ ಪೋಸ್ಟರ್ ಹಾಕಲಾಗಿದ್ದು, ಅದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ದಾವಣಗೆರೆಯಲ್ಲಿ ಮಾತ್ರ ಈ ಹಾಡಿನ ಚಿತ್ರೀಕರಣ ನಡೆಯಲಿದೆ. ಮುಂದಿನ ದಿನಗಳಲ್ಲಿ ಉತ್ತರ ಕರ್ನಾಟಕ ಶೈಲಿಯ ಹಾಡು ಮಾಡುವ ಚಿಂತನೆ ಇದ್ದು, ಅಭಿಮಾನಿಗಳಿಂದಲೂ ಬೇಡಿಕೆ ಬರುತ್ತಿದೆ ಎಂದರು.

# ರೆಡ್‌ಕ್ರಾಸ್ ನಿಂದ ಪ್ರಬಂಧ ಸ್ಪರ್ಧೆ

ದಾವಣಗೆರೆ, ಜ.1- ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದಾವಣಗೆರೆ ಜಿಲ್ಲಾ ಶಾಖೆ ವತಿಯಿಂದ ಗಣರಾಜ್ಯೋತ್ಸವ ಅಂಗವಾಗಿ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲಿ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿ-ಗಣತಂತ್ರ ವ್ಯವಸ್ಥೆ (ಸಾಧಕ-ಬಾಧಕಗಳು) ವಿಷಯವನ್ನು ಕುರಿತು, ಪರ ಅಥವಾ ವಿರೋಧವಾಗಿ 500 ಪದಗಳನ್ನು ಮೀರದಂತೆ ಪ್ರಬಂಧ ಬರೆದು ಪಿಡಿಎಫ್ ಫೈಲ್‌ನಲ್ಲಿ ಅಥವಾ ಉತ್ತರ ಪತ್ರಿಕೆಗಳ ಮೂಲಕ ಇದೇ ದಿನಾಂಕ 11 ರೊಳಗೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗೆ ಕಳುಹಿಸುವುದು. ಹೆಚ್ಚಿನ ಮಾಹಿತಿಗೆ ಸಂಚಾಲಕ ಎ.ಜೆ. ರವಿಕುಮಾರ್ (918892988989) ಅವರನ್ನು ಸಂಪರ್ಕಿಸಬಹುದು.






**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ 80x60 East, 80x60 West, 40x60 North, 40x60 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166,12110

**ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ**
ನಾಗನೂರಿನಲ್ಲಿ ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ. : 94489 66128

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ, ಶಿವ ಪಾರ್ವತಿ ಬಡಾವಣೆ 40x60 ಪೂರ್ವ, ವಿನಾಯಕ ಬಡಾವಣೆಯಲ್ಲಿ 40x50 ಪೂರ್ವ
ಧನ್ಯಕುಮಾರ್ ಶಾಮನೂರು
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
30x63 South west corner ಡಾಲರ್ಸ್ ಕಾಲೋನಿಯಲ್ಲಿ., 60x40 North South corner, ಮಹಾಲಕ್ಷ್ಮಿ ಲೇಔಟ್‌ನಲ್ಲಿ., 70x50 East South ಕಾರ್ನರ್ ಆಂಜನೇಯ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166,12110

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಸೈಟುಗಳು ಮಾರಾಟಕ್ಕಿವೆ**
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಉತ್ತರ, ಆಂಜನೇಯ ಬಡಾವಣೆಯಲ್ಲಿ 40x60 ದಕ್ಷಿಣ, ಜೆ. ಹೆಚ್. ಪಟೇಲ್ ಬಡಾವಣೆಯಲ್ಲಿ 30x52 ಪೂರ್ವ 40 ಅಡಿ ರಸ್ತೆಗೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**3 ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತಾರಾಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಮನೆಯಲ್ಲಿಯೇ ಇದ್ದು ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಸತಿ ಕೊಡಲಾಗುವುದು, ಅಥವಾ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಕೆಲಸ.
77604 84814
98865 67791

**WANTED TEACHERS**
B.Sc B.Ed (CBZ) -1
BA B.Ed (English Major)-2
BA B.Ed (Social Science)-2
D.Ed.- (English.Maths)-2
ACM SCHOOL
Devaraja Urs Lay-out, C Block, 2nd Cross, Davangere.
89703 21855, 81057 54995

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ಗೆ ಕೆಲಸಗಾರರು ಬೇಕಾಗಿದ್ದಾರೆ ಸ್ಟೋರ್ ಕೀಪರ್ - 3, ಬಿಲ್ಲಿಂಗ್ ಮಾಡಲು-2, ಡೆಲಿವರಿ ಬಾಯ್ಸ್ -2, ಮಾರ್ಕೆಟಿಂಗ್ ಮ್ಯಾನೇಜರ್-1, ಹೌಸ್ ಕೀಪಿಂಗ್-2
ಸಂಪರ್ಕಿಸಿ
99864 52865, 89717 62222

**ಬೇಕಾಗಿದ್ದಾರೆ**
ಸಪ್ಲೈಯರ್, ಕ್ಲೀನರ್, ಹೋಟೆಲ್‌ನಲ್ಲಿ ಕೆಲಸ ಮಾಡಲು ಆಸಕ್ತರು ಬೇಕಾಗಿದ್ದಾರೆ.
99861 17995

**ಮನೆ ಬಾಡಿಗೆಗೆ**
2 ಬೆಡ್ ರೂಂ ಇರುವ ಮೊದಲ ಮಹಡಿ ಮನೆ KSRTC ಹಿಂಭಾಗ, 2ನೇ ಕ್ರಾಸ್, ವೀಣಾ ಕ್ಲಿನಿಕ್ ರೋಡ್, D.No. 2127/2 ದಾವಣಗೆರೆ.
81059 11293
98455 59844

**ಬೇಕಾಗಿದ್ದಾರೆ**
Service Advisor, Floor Supervisor, Technician, Helper ಫ್ರೆಷರ್ಸ್ ಮತ್ತು ಅನುಭವವುಳ್ಳ ಪುರುಷರು ಮಾತ್ರ ಬೇಕಾಗಿದ್ದಾರೆ.Salary + Incentive
ಶ್ರೀ ನಿವಾಸ ಹೋಂಡಾ
ಸಂಪರ್ಕಿಸಿ: 88844 45242

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 2BHK (15x50) ಅಡಿಯುಳ್ಳ ಮನೆ ಬಾಡಿಗೆಗೆ ಇದೆ. ಕಾರ್ಪೊರೇಷನ್ ಮತ್ತು ಬೋರ್ ನೀರಿನ ವ್ಯವಸ್ಥೆ ಇದೆ. ವಿಚಾರಿಸಿ
98808 12670

**ಜಮೀನು ಬೇಕಾಗಿದೆ**
ದಾವಣಗೆರೆ ಸುತ್ತ ಬೆದ್ದಲು ಜಮೀನು ಬೇಕಾಗಿದೆ.
94480 41500

**ಮನೆ ಬಾಡಿಗೆಗೆ ಇದೆ**
ಮೊದಲನೆಯ ಮಹಡಿಯಲ್ಲಿ 2 ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್ ಜೈನ್ ಮಂದಿರ ಹತ್ತಿರ, ದಾವಣಗೆರೆ
70198 96845

**ಬಾಡಿಗೆಗೆ**
ಸುಸಜ್ಜಿತವಾದ ಮಳಿಗೆ ಶೋ ರೂಂ ಹಾಗೂ ಬಟ್ಟೆ ಅಂಗಡಿಗೆ ಯೋಗ್ಯವಾದ ಮಳಿಗೆ ಹದಡಿ ಮುಖ್ಯ ರಸ್ತೆ, ಶಿವಕುಮಾರಸ್ವಾಮಿ ಬಡಾವಣೆ, ನೆಲ ಮಹಡಿ 2700 ಚ. ಅಡಿ, ಮೊದಲನೇ ಮಹಡಿ 4050 ಚ. ಅಡಿ. ಸಂಪರ್ಕಿಸಿ:
84959 91223

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ Sales girls / Sales boys ಬೇಕಾಗಿದ್ದಾರೆ.
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

**ಮನೆ ಬಾಡಿಗೆಗೆ ಇದೆ**
M.C.C. A Block ನಲ್ಲಿ (ಚರ್ಚ್ ಹತ್ತಿರ) ಎಲ್ಲ ಅನುಕೂಲಗಳಿರುವ 1 ಬೆಡ್ ರೂಮ್ ಇರುವ ವಿಶಾಲವಾದ ಮನೆ ಬಾಡಿಗೆಗೆ ಇದೆ. ಹಿಂದೆ, ಮುಂದೆ, RCC, ಮಧ್ಯ ಶೀಟ್ ಇರುವ, ಮಹಡಿಯ ಮೇಲಿರುವ ಮನೆ ಕಡಿಮೆ ಬಾಡಿಗೆಯಲ್ಲಿ ದೊರೆಯುತ್ತದೆ.
97430 98298

**FOR RENT**
30x12 Commercial Shop Near More Shop, Hadadi road
96868 23332

**REQURIED**
B.Com Graduate with Tally knowledge for Auditors office. Contact between 11am to 6pm
96861 39621

**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 12.8 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಕೆಲಸಗಾರರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕ್ಲೀನಿಂಗ್ ಹಾಗೂ ಸಪ್ಲೈ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯ ಇರುತ್ತದೆ.
80739 86139
91417 92721

**ಮನೆ ಲೀಸ್‌ಗೆ ಇದೆ**
ದೇವರಾಜ್ ಅರಸ್ 'ಬಿ' ಬ್ಲಾಕ್ 12ನೇ ಕ್ರಾಸ್‌ನಲ್ಲಿರುವ 1ನೇ ಮಹಡಿಯಲ್ಲಿರುವ ಪೂರ್ವ ದಿಕ್ಕಿನ, 2ಬೆಡ್‌ರೂಂ 2 ಹಾಲ್ ದೇವರ ಮನೆ ಇರುವ ಸುಸಜ್ಜಿತ ಮನೆ ಲೀಸ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ ಅವಕಾಶ
ಸಂಪರ್ಕಿಸಿ:
99163 23302

**ಮನೆ ಬಾಡಿಗೆಗೆ /ಲೀಜ್‌ಗೆ ಇದೆ**
ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ, 1ನೇ ಕ್ರಾಸ್, #1077/10ರಲ್ಲಿ 3 ಬೆಡ್ ರೂಂ ಕಾರ್ ಪಾರ್ಕಿಂಗ್ ಇರುವ ಮೊದಲ ಮಹಡಿ ಮನೆ ಬಾಡಿಗೆಗೆ ಇದೆ. ವಿಚಾರಿಸಿ
97425 52737

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ.
98442-94446

**ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
99868 86464

**Contact For**
3D Floor plan, 3D Elevation, Interior Designs, kitchen Designs, Ceiling Design
91106 99014

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6BHK ಮನೆ 60x44 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ, ಡ್ಯೂಪ್ಲೆಕ್ಸ್ ಮನೆ #1935/7, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
99007 00091

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನ ಹತ್ತಿರ ಹದಡಿ ರೋಡ್ ದಾವಣಗೆರೆ.
ಫೋ. : 84315 68521

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ :
ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
(ಹುಡುಗರು) ರೆಡಿಮೇಡ್ ಅಂಗಡಿಯಲ್ಲಿ 5 ವರ್ಷ ಅನುಭವವುಳ್ಳ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ವೇತನ ರೂ 8000 ದಿಂದ 10,000
ಶ್ರೀ ಗಣೇಶ್ ಹೊಸೈರಿ ಮಾರ್ಟ್
ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರೋಡ್, ದಾವಣಗೆರೆ
94482 07473

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಹಾರ್ಡ್‌ವೇರ್ ಸಾಮಗ್ರಿಗಳನ್ನು ಮಾರಾಟ ಮಾಡು ಅನುಭವವುಳ್ಳವರು ಸಂಪರ್ಕಿಸಿ
70190 51306

**ಸಾರ್ವಜನಿಕ ಪ್ರಕಟಣೆ**
ನನ್ನ ಕಕ್ಷಿದಾರರಾದ **ಶ್ರೀಮತಿ ಜಿ.ಎಸ್. ಲೀಲಾವತಿ ಕೋಂ. ಲೇಟ್ ಹೆಚ್.ಹೆಚ್. ವಿಜಯಕುಮಾರ್,** 10ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ ಇವರ ಪರವಾಗಿ, ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,
ಮೇಲ್ಕಂಡ ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಆಸ್ತಿಯ ಮಾಲೀಕರಾದ **ಶ್ರೀ ರಾಖೇಶ್ ಸಿ.ಎನ್. ಬಿನ್ ನಿರಂಜನಮೂರ್ತಿ ಸಿ.ಜಿ.** ರಾಖೇಶ್ ನಿಲಯ, ಬಸವೇಶ್ವರ ಬಡಾವಣೆ, ದಾವಣಗೆರೆ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಆಸ್ತಿಯ ಬಗ್ಗೆ ಸಾರ್ವಜನಿಕರು ಯಾರೇ ಆಗಲಿ ತಂಟೆ ತಕರಾರು ಅಥವಾ ಯಾವುದೇ ರೀತಿ ಹಕ್ಕು ಬಾಧ್ಯತೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಗೊಂಡ ಐದು ದಿನದೊಳಗೆ ಈ ಕೆಳಕಂಡ ವಕೀಲರನ್ನಾಗಲೀ ಅಥವಾ ನನ್ನ ಕಕ್ಷಿದಾರದಾರರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಸದರಿ ಐದು ದಿನದೊಳಗೆ ಯಾವುದೇ ತಕರಾರು, ಆಕ್ಷೇಪಣೆ ಬಾರದಿದ್ದಲ್ಲಿ ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯುವ ಈ ಷೆಡ್ಯೂಲ್ ಆಸ್ತಿಯ ಬಗ್ಗೆ ಯಾವುದೇ ವ್ಯಕ್ತಿಯ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ, ನನ್ನ ಕಕ್ಷಿದಾರರು ಷೆಡ್ಯೂಲ್ ಸೊತ್ತನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಅಥವಾ ವ್ಯವಹರಿಸಲು ಹಕ್ಕುಳ್ಳವರಾಗುತ್ತಾರೆ.
**ಷೆಡ್ಯೂಲ್ : ದಾವಣಗೆರೆ ಮಹಾನಗರ ಪಾಲಿಕೆ, ಆವರಗೆರೆ ವಿಭಾಗದ ಜಯನಗರ 'ಬಿ' ಬ್ಲಾಕ್‌ನಲ್ಲಿರುವ ನಿವೇಶನ ಸಂಖ್ಯೆ 68, ಡಿ.ಎಂ.ಪಿ. ನಂ. 403/68, ಖಾತೆ ನಂ. 5397, ವಿಸ್ತೀರ್ಣ 30'×40'ರಲ್ಲಿ ಕಟ್ಟಿಸಿರುವ RCC ಮನೆಗೆ ಚಕ್ಕುಬಂದಿ : ಪೂರ್ವ : ರಸ್ತೆ, ಪಶ್ಚಿಮ : ಸೈಟ್ ನಂ. 71, ಉತ್ತರ : ಸೈಟ್ ನಂ. 67, ದಕ್ಷಿಣ : ಸೈಟ್ ನಂ. 69 ಈ ಮಧ್ಯದ ಒಂದು ಸೊತ್ತು.**
ಸಂಪರ್ಕಿಸಬೇಕಾದ ವಿಳಾಸ :
ಮಂಜುನಾಥ ಮರುಳಸಿದ್ದಪ್ಪ ಹುಲ್ಲೇರ, ವಕೀಲರು
R. No. : KAR. 41/1993, #150/C, ಸವಣೂರು ಆರ್ಕೇಡ್, ಲಾಯರ್ ರಸ್ತೆ, ದಾವಣಗೆರೆ-2. ಮೊ. : 94487 05437

**Simple vaastu**
ಸಿಂಪಲ್ ವಾಸ್ತು
98444 88838

**ಬೇಕಾಗಿವೆ**
ಬಾಡಿಗೆಗೆ /ಲೀಸ್‌ಗೆ ಮನೆಗಳು ಬೇಕಾಗಿವೆ
86181 82332

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**WANTED**
Web Designers and Digital Marketing Experienced Persons Wanted Immediately
Call Us :
95359 24441

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠ್. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮನೆ ಬಾಡಿಗೆಗೆ ಇದೆ**
ನಗರದ ಸರಸ್ವತಿ ಬಡಾವಣೆಯ ನೀರಿನ ಟ್ಯಾಂಕಿನ ಬಳಿ 3 ಬೆಡ್ ರೂಮ್, ಕಾರ್ಪೊರೇಷನ್ ಮತ್ತು ಬೋರ್ ವೆಲ್ ನೀರಿನ ವ್ಯವಸ್ಥೆಯಿರುವ ಸುಸಜ್ಜಿತ ಮೊದಲನೆಯ ಮಹಡಿ ಮನೆ ಬಾಡಿಗೆಗೆ ಇದೆ.
ಮುಖ್ಯ ದ್ವಾರದ ದಿಕ್ಕು: ಪಶ್ಚಿಮ
ಸಂಪರ್ಕಿಸಿ
96631 00400


# ದೆಹಲಿಯಲ್ಲಿನ ರೈತರ ಹೋರಾಟಕ್ಕೆ ಎಪಿಎಂಸಿ ಹಮಾಲರ ಬೆಂಬಲ



ದಾವಣಗೆರೆ, ಜ.1- ದೆಹಲಿಯಲ್ಲಿ ರೈತರ ಹೋರಾಟವನ್ನು ಬೆಂಬಲಿಸಿ ಅಖಿಲ ಭಾರತ ಹಮಾಲಿ ಕಾರ್ಮಿಕ ಸಂಘಟನೆ ನೀಡಿರುವ ತುರ್ತು ಹೋರಾಟದ ಕರೆಯ ಮೇರೆಗೆ ವಿಘ್ನೇಶ್ವರ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಹಮಾಲರ ಸಂಘದ ನೇತೃತ್ವದಲ್ಲಿ ನಗರದಲ್ಲಿಂದು ಪ್ರತಿಭಟಿಸಲಾಯಿತು.

ಎಪಿಎಂಸಿ ಆವರಣದಲ್ಲಿ ಜಮಾಯಿಸಿದ್ದ ಸಂಘದ ಪದಾಧಿಕಾರಿಗಳು, ಕೇಂದ್ರ ಸರ್ಕಾರದ ರೈತ ವಿರೋಧಿ ಮತ್ತು ಕಾರ್ಮಿಕ ವಿರೋಧಿ ಕಾಯಿದೆಗಳ ಪ್ರತಿಗಳನ್ನು ಹರಿದು ಹಾಕುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಕಾರ್ಮಿಕ ಹಕ್ಕುಗಳನ್ನು ಉಳಿಸುತ್ತೇವೆ, ರೈತರ ಬದುಕನ್ನು ರಕ್ಷಿಸುತ್ತೇವೆ, ಕಾರ್ಪೊರೇಟ್ ಹಿಡಿತದಿಂದ ದೇಶವನ್ನು ಕಾಪಾಡುತ್ತೇವೆ ಎಂಬ ಪ್ರತಿಜ್ಞೆ ಮಾಡಲಾಯಿತು.

ಮೂರು ಕೃಷಿ ಕಾನೂನುಗಳನ್ನು ವಾಪಸ್ ಪಡೆಯಬೇಕು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ವಾರ್ಷಿಕ 200 ದಿನಗಳ ಕೆಲಸ ಮತ್ತು ದಿನಕ್ಕೆ 700 ರೂ. ಕೂಲಿ ನೀಡಬೇಕು, ನಗರ ಪ್ರದೇಶಗಳಿಗೂ ಈ ಯೋಜನೆಯನ್ನು ವಿಸ್ತರಿಸಬೇಕು. ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳನ್ನು ವಿಸ್ತರಿಸಬೇಕು. ಉಚಿತ ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು ಎಲ್ಲರಿಗೂ ಜಾರಿಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಹಮಾಲಿ ಕಾರ್ಮಿಕ ಸಂಘದ ಹಾಲೇಶನಾಯ್ಕ, ಕುಮಾರನಾಯ್ಕ, ಬಸವರಾಜು, ಸಿಐಟಿಯು ಸಂಘದ ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜು ಸೇರಿದಂತೆ ಇತರರು ಭಾಗವಹಿಸಿದ್ದರು.

# ಪಾಪು ಗುರು ಅವರ ಕಾದಂಬರಿ 'ಸೂಜಿ'ಯ 2ನೇ ಮುದ್ರಣ ಲೋಕಾರ್ಪಣೆ

ದಾವಣಗೆರೆ, ಜ.1 - ನಗರದ ಲೇಖಕ ಪಾಪು ಗುರು ಅವರ ಬಹು ನಿರೀಕ್ಷಿತ 'ಸೂಜಿ' ಕಾದಂಬರಿಯು ಸಾಹಿತ್ಯ ವಲಯದಲ್ಲಿ ನವ ನೂತನ ಸಂಚಲನ ಮೂಡಿಸಿ ಮೊದಲ ಮುದ್ರಣದ ಪ್ರತಿಗಳು ಕೈ ಸೇರುವ ಮುನ್ನವೇ ಸಾಮಾಜಿಕ ಜಾಲತಾಣದ ಮೂಲಕ ಓದುಗರ ಕೈ ಸೇರಿ, ಎರಡನೇ ಮುದ್ರಣ ಪ್ರಕಟಗೊಂಡು ಓದುಗರಿಂದ ಮುಂಗಡ ಬುಕ್ಕಿಂಗ್ ಸಹ ಆಗಿರುವ ಸಂಭ್ರಮದ ಸಂಕೇತವಾಗಿ ದಾವಣಗೆರೆ ದಿ. ಶಿವಲಿಂಗಪ್ಪ ಸಾಹಿತ್ಯ ಬಳಗ, ಸಿದ್ಧಗಂಗಾ ವಿದ್ಯಾಸಂಸ್ಥೆ ಹಾಗೂ ಇಮೇಜ್ ಬಳಗದ ಸಂಯುಕ್ತಾಶ್ರಯದಲ್ಲಿ 2ನೇ ಮುದ್ರಣದ 'ಸೂಜಿ' ಕಾದಂಬರಿಯ ಲೋಕಾರ್ಪಣೆ ಸಮಾರಂಭವನ್ನು ನಾಡಿದ್ದು ದಿನಾಂಕ 3 ಭಾನುವಾರ ಮಧ್ಯಾಹ್ನ 3 ಗಂಟೆಗೆ ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸುವರ್ಣ ಸೌಧ ಸಭಾಂಗಣದಲ್ಲಿ ಆಯೋಜಿಸಲಾಗಿದೆ.



ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೋಜಾ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಿರಿಯ ಕಾದಂಬರಿಗಾರ್ತಿ ಶ್ರೀಮತಿ ಜಿ. ಎಸ್. ಸುಶೀಲಾ ದೇವಿ ಆರ್.ರಾವ್ ಅವರು ಎರಡನೇ ಮುದ್ರಣದ ಸೂಜಿ ಕೃತಿ ಲೋಕಾರ್ಪಣೆ ಮಾಡುವರು. ಉಪನ್ಯಾಸಕಿ, ಲೇಖಕರಾದ ಶ್ರೀತಮಿ ಅನ್ನಪೂರ್ಣ ಪಾಟೀಲ್ ಕೃತಿ ಅವಲೋಕನ ಮಾಡುವರು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಸದಾನಂದ ಹೆಗಡೆ, ಸಾಹಿತಿಗಳಾದ ಡಾ. ಆನಂದ್ ಋಗ್ವೇದಿ, ಮಹಾಂತೇಶ್ ಬಿ. ನಿಟ್ಟೂರು, ಸಂತೇಬೆನ್ನೂರು ಫೈಜ್ನಟ್ರಾಜ್ ಅವರುಗಳು ಕೃತಿ ಕುರಿತು ಅಭಿಪ್ರಾಯದ ನುಡಿಯಾಡುವರು.

# ಅಸಾಂಕ್ರಾಮಿಕ ರೋಗಗಳ ಪತ್ತೆಗೆ ವಿಶೇಷ ಗಮನ ಹರಿಸಲು ಕರೆ




ಮಲೇಬೆನ್ನೂರು, ಜ.1- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮಂಗಳವಾರ ಅಸಾಂಕ್ರಾಮಿಕ ರೋಗಗಳ ವಿಭಾಗದ ಜಂಟಿ ನಿರ್ದೇಶಕ ಡಾ. ಶ್ರೀನಿವಾಸ್ ಅವರು ಭೇಟಿ ನೀಡಿ, ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಗ್ರಾಮೀಣ ಪ್ರದೇಶಗಳಲ್ಲಿ 30 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆ ಮತ್ತು ಪುರುಷರಲ್ಲಿ ಉಂಟಾಗುವ ಆರೋಗ್ಯದ ಏರುಪೇರುಗಳಲ್ಲಿ ಆಗುವ ವ್ಯತ್ಯಾಸದಿಂದಾಗಿ ಅಸಾಂಕ್ರಾಮಿಕ ರೋಗಗಳು ಉಂಟಾಗುತ್ತವೆ. ಇವು ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದಿಲ್ಲ ಎಂದು ಡಾ. ಶ್ರೀನಿವಾಸ್ ಸ್ಪಷ್ಟಪಡಿಸಿದರು.

ಬಿ.ಪಿ, ಸಕ್ಕರೆ ಕಾಯಿಲೆ, ಹೃದಯ ರೋಗ, ಕಿಡ್ನಿ ಸಮಸ್ಯೆ, ಕ್ಯಾನ್ಸರ್ ಸೇರಿದಂತೆ ಇನ್ನೂ ಮುಂತಾದ ಕಾಯಿಲೆಗಳನ್ನು ಪ್ರಾಥಮಿಕ ಹಂತದಲ್ಲೇ ಪತ್ತೆ ಮಾಡಲು ಎಲ್ಲಾ ಆರೋಗ್ಯ ಕಾರ್ಯಕರ್ತರಿಗೆ ಬಿಪಿ, ಸಕ್ಕರೆ ಕಾಯಿಲೆ ಪತ್ತೆ ಮಾಡುವ ಯಂತ್ರಗಳನ್ನು ನೀಡಲಾಗಿದೆ. ಇವರಿಗೆ ತರಬೇತಿ ನೀಡಿ, ಗ್ರಾಮೀಣ ಪ್ರದೇಶಗಳಲ್ಲಿ ಅಸಾಂಕ್ರಾಮಿಕ ರೋಗಗಳ ಪ್ರಾರಂಭಿಕ ಲಕ್ಷಣಗಳನ್ನು ಗುರುತಿಸಿ, ಆದಷ್ಟು ಬೇಗ ಚಿಕಿತ್ಸೆ ನೀಡುವಂತೆ ವೈದ್ಯಾಧಿಕಾರಿಗಳಿಗೆ, ಆರೋಗ್ಯ ಹಾಗೂ ಆಶಾ ಕಾರ್ಯಕರ್ತರಿಗೆ ಡಾ. ಶ್ರೀನಿವಾಸ್ ಕರೆ ನೀಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಟಿಹೆಚ್‌ಓ ಡಾ. ಚಂದ್ರಮೋಹನ್, ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ಹಿರಿಯ ಆರೋಗ್ಯ ಸಹಾಯಕರಾದ ಎಂ.ಉಮಣ್ಣ, ಎಂ.ವಿ.ಹೊರಕೇರಿ, ಎನ್‌ಸಿಡಿ ಕೋ ಆರ್ಡಿನೇಟರ್ ಡಾ. ಗೌಡ, ಸತೀಶ್, ಜಿಲ್ಲಾ ಮೇಲ್ವಿಚಾರಕ ಕಿರಣ್ ಮತ್ತಿತರರು ಈ ವೇಳೆ ಹಾಜರಿದ್ದರು.

ನಂತರ ಡಾ. ಶ್ರೀನಿವಾಸ್ ಅವರು ಭಾನುವಳ್ಳಿ, ನಂದಿಗುಡಿ ಆರೋಗ್ಯ ಕೇಂದ್ರಗಳಿಗೂ ಭೇಟಿ ನೀಡಿದರು.

## ಮಾಲ್, ಪೆಟ್ರೋಲ್ ಪಂಪ್ ಬಂದ್

**(1ನೇ ಪುಟದಿಂದ)** 4ರಂದು ಮಾತುಕತೆ ನಡೆಯುವುದಕ್ಕೆ ಮುಂಚೆ ಹೇಳಿಕೆ ನೀಡಿರುವ ದೆಹಲಿಯಲ್ಲಿ ಪ್ರತಿಭಟನಾ ನಿರತ ರೈತ ಸಂಘಟನೆಗಳು, ಸರ್ಕಾರ ಬೇಡಿಕೆಗಳನ್ನು ಈಡೇರಿಸದೇ ಹೋದರೆ ಹರಿಯಾಣದಲ್ಲಿರುವ ಎಲ್ಲಾ ಮಾಲ್ ಹಾಗೂ ಪೆಟ್ರೋಲ್ ಪಂಪ್‌ಗಳನ್ನು ಮುಚ್ಚುವುದಾಗಿ ಎಚ್ಚರಿಕೆ ನೀಡಿವೆ.

## ಧೈರ್ಯವಾಗಿ ಶಾಲೆಗೆ ಕಳುಹಿಸಿ: ಡಿಸಿ

**(1ನೇ ಪುಟದಿಂದ)** ಮಕ್ಕಳಿಗೆ ತರಗತಿ ಆರಂಭವಾಗಿವೆ ಎಂದರು.

ಜಿಲ್ಲೆಯಲ್ಲಿ 21 ಸಾವಿರ ಹತ್ತನೇ ತರಗತಿ ಮಕ್ಕಳಿದ್ದು, 1.80 ಲಕ್ಷ 6-9ನೇ ತರಗತಿ ಮಕ್ಕಳಿದ್ದಾರೆ. ಎಲ್ಲರನ್ನೂ ಶಾಲೆಗೆ ಕರೆ ತಂದು ಉತ್ತಮ ಶಿಕ್ಷಣ ನೀಡಲಾಗುವುದು ಎಂದರು.

# ಕೊಂಡಜ್ಜಿ : ಇಂದು - ನಾಳೆ ಗಿರಿಜನ ಉತ್ಸವ-ನಾಯಕ ನೌಕರರ ಸಮಾವೇಶ

ದಾವಣಗೆರೆ, ಜ.1- ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ನಾಳೆ ದಿನಾಂಕ 2 ಮತ್ತು 3ರಂದು ಹರಿಹರ ತಾಲ್ಲೂಕಿನ ಕೊಂಡಜ್ಜಿಯ ಸ್ಕೌಟ್ ಅಂಡ್ ಗೈಡ್ಸ್ ಸಭಾ ಭವನದಲ್ಲಿ ಜಿಲ್ಲಾ ಘಟಕದ 2021ರ ಕ್ಯಾಲೆಂಡರ್ ಬಿಡುಗಡೆ, ದಾವಣಗೆರೆ ತಾಲ್ಲೂಕು ಕಾರ್ಯಕಾರಿ ಸಮಿತಿ ಪದಗ್ರಹಣ, ರಾಜ್ಯ ಕಾರ್ಯಕಾರಿಣಿ ಸಭೆ, ಗಿರಿಜನ ಉತ್ಸವ, ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ, ನಾಯಕ ನೌಕರರ ಜಿಲ್ಲಾ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ನಾಳೆ ದಿನಾಂಕ 2ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಡೆಯುವ ಪರಿಶಿಷ್ಟ ಪಂಗಡಗಳ ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ಕುರಿತ ಅರಿವು ಮತ್ತು ಜಾಗೃತಿ ಕಾರ್ಯಾಗಾರವನ್ನು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಿ. ಆನಂದ್ ಉದ್ಘಾಟಿಸುವರು. ನಿವೃತ್ತ ಖಜಾನಾಧಿಕಾರಿ ಎಂ. ಬಸವರಾಜ್, ಮುಖ್ಯ ಅತಿಥಿಗಳಾಗಿ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಲಕ್ಷ್ಮೀಕಾಂತ ಬೊಮ್ಮಣ್ಣನವರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಕೆ.ಹೆಚ್.ವಿಜಯಕುಮಾರ್, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಬಿ. ಶ್ರೀನಿವಾಸ, ವಲಯ ಅರಣ್ಯಾಧಿಕಾರಿ ಕೆ.ಬಿ. ಶರಣಪ್ಪ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ಶ್ರೀನಿವಾಸ ನಾಯಕ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹೆಚ್.ಪಿ. ರಾಜೇಶ್ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ಮಧ್ಯಾಹ್ನ 1ರಿಂದ ಪರಿಶಿಷ್ಟ ಪಂಗಡಗಳ ನೌಕರರಿಗೆ ಮೀಸಲಾತಿ ನಿಯಮಾವಳಿಗಳ ಕುರಿತು ಅರಿವು ಮತ್ತು ಜಾಗೃತಿ ಕಾರ್ಯಾಗಾರ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ತಾಲ್ಲೂಕು ಘಟಕದ ಪದಾಧಿಕಾರಿಗಳ ಪದಗ್ರಹಣ, 3 ಗಂಟೆಯಿಂದ ನಾಯಕ ಪರಂಪರೆ ಹಾಗೂ ಇತಿಹಾಸ ಕುರಿತು ಉಪನ್ಯಾಸ, 3.30ರಿಂದ ಕಾರ್ಯಕಾರಿಣಿ ಸಭೆ, ಸಂಜೆ 6 ಗಂಟೆಯಿಂದ ಗಿರಿಜನ ಉತ್ಸವ ನಡೆಯಲಿದೆ. ನಾಡಿದ್ದು ದಿನಾಂಕ 3ರ ಭಾನುವಾರ ಬೆಳಿಗ್ಗೆ 7ರಿಂದ ಯೋಗ ಮತ್ತು ಧ್ಯಾನ ಶಿಬಿರ, 10 ಗಂಟೆಗೆ ಕಾರ್ಯಾಗಾರ, 11 ರಿಂದ ವ್ಯಕ್ತಿತ್ವ ವಿಕಸನ ಶಿಬಿರ, ಮಧ್ಯಾಹ್ನ 12 ಗಂಟೆಯಿಂದ ನಾಯಕ ನೌಕರರ ಸಮಾವೇಶ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್.ಹೆಚ್. ಗೋವಿಂದರಾಜ್, ಕೆ. ನಾಗರಾಜ್, ಎಸ್.ಕೆ. ಸ್ವಾಮಿ, ಜಿ. ಅಣ್ಣಪ್ಪ, ಎನ್.ಬಿ. ಗುಂಡಪ್ಪ ಸೇರಿದಂತೆ ಇತರರು ಇದ್ದರು.

# ಭರವಸೆಯ ಹೊಸ ವರ್ಷಕ್ಕೆ ಸ್ವಾಗತ



ಕನಗೊಂಡನಹಳ್ಳಿ ಗ್ರಾಮದಲ್ಲಿ ಶಿಕ್ಷಕರೊಬ್ಬರು ರಸ್ತೆ ಮೇಲೆ ಹ್ಯಾಪಿ ನ್ಯೂ ಇಯರ್ ಎಂದು ಬಣ್ಣದಿಂದ ಬರೆಯುತ್ತಿರುವುದು

**(1ನೇ ಪುಟದಿಂದ)** 10ರ ವೇಳೆಗಾಗಲೇ ಪೊಲೀಸ್ ವಾಹನಗಳು ಗಸ್ತು ತಿರುಗಲಾರಂಭಿಸಿದ್ದವು. ಬೀದಿ ಬದಿ ನಿಲ್ಲುವವರಿಗೆ, ಹೋಟೆಲ್, ಬಾರ್‌ಗಳ ಮುಂದೆ ಇದ್ದವರಿಗೆ ಪೊಲೀಸರು ಮನೆಗೆ ತೆರಳುವಂತೆ ಸೂಚಿಸುತ್ತಿದ್ದರು. ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಸಂಭ್ರಮಾಚರಣೆಗೆ ಅವಕಾಶವಿಲ್ಲೆಂದು ಮೈಕ್‌ಗಳ ಮೂಲಕ ಕೂಗುತ್ತಿದ್ದುದು ಕಂಡು ಬಂತು.

**ಕೇಕ್‌ಗೆ ಬೇಡಿಕೆ:** ಹೊಸ ವರ್ಷದ ಹಿನ್ನೆಲೆಯಲ್ಲಿ ಕೇಕ್‌ಗೆ ನಗರದಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಈ ಹಿನ್ನೆಲೆಯಲ್ಲಿ ಬೇಕರಿಗಳು ಪ್ರತ್ಯೇಕ ಸ್ಟಾಲ್ ನಿರ್ಮಿಸಿ, ಕೇಕ್ ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಕಲ್ಪಿಸಿದ್ದವು.

**ಹೋಟೆಲ್‌ಗಳಲ್ಲಿ ಜನ ಸಾಗರ:** ಬಾರ್ ಅಂಡ್ ರೆಸ್ಟೋರೆಂಟ್‌ಗಳು ಬಹುತೇಕ ಭರ್ತಿಯಾಗಿದ್ದವು. ಕೆಲ ಫ್ಯಾಮಿಲಿ ರೆಸ್ಟೋರೆಂಟ್‌ಗಳ ಒಳಗೆ ಸಂಭ್ರಮಾಚರಣೆಗಾಗಿ ವಿಶೇಷ ಅಲಂಕಾರ ಮಾಡಲಾಗಿತ್ತು. ಕುಟುಂಬ ಸಹಿತ ಆಗಮಿಸಿದ್ದ ಜನತೆ ತಡ ರಾತ್ರಿವರೆಗೆ ಸಂಭ್ರಮಿಸಿದರು.

**ದೇವಸ್ಥಾನಗಳಲ್ಲಿ ಪೂಜೆ:** ವರ್ಷದ ಮೊದಲ ದಿನದ ಅಂಗವಾಗಿ ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು. ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಶುಕ್ರವಾರ ಮುಂಜಾನೆ ನಗರಕ್ಕೆ ಸಮೀಪದ ಆನಗೋಡು ಪಾರ್ಕ್, ಕೊಂಡಜ್ಜಿ ಕೆರೆ ಬಳಿಯ ಪಾರ್ಕ್ ಸೇರಿದಂತೆ, ನಗರದೊಳಗಿನ ಪಾರ್ಕುಗಳಲ್ಲಿ ಕುಟುಂಬ ಸಹಿತ ಬಂದ ಜನತೆ ಸಂಭ್ರಮಪಟ್ಟರು.

**ಹಳ್ಳಿಗಳಲ್ಲೂ ಸಂಭ್ರಮ:** ಸಿಟಿ ಮಂದಿಗಿಂತ ತಾವೇನೂ ಕಮ್ಮಿ ಎನ್ನುವಂತೆ ಹಳ್ಳಿಗಳಲ್ಲೂ ಹೊಸ ವರ್ಷವನ್ನು ಸಂಭ್ರಮದಿಂದ ಬರಮಾಡಿಕೊಳ್ಳಲಾಯಿತು. ಯುವಕರು ರಾತ್ರಿ ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ, ಕೇಕೆ ಹಾಕಿ ಸಂಭ್ರಮಿಸಿದರು.

ಪ್ರಮುಖ ರಸ್ತೆಗಳಲ್ಲಿ, ಮನೆಗಳ ಮುಂದೆ ಹೊಸ ವರ್ಷಕ್ಕೆ ಸ್ವಾಗತ ಕೋರುವ ರಂಗೋಲಿ, ಬಣ್ಣದ ಸಾಲುಗಳನ್ನು ಬರೆಯಲಾಗಿತ್ತು.

## ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್ ಸ್ಪರ್ಧೆಗಳು

ದಾವಣಗೆರೆ, ಜ.1- ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ 20ನೇ ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್ ಆಯ್ಕೆ ಸ್ಪರ್ಧೆಗಳು ಈ ತಿಂಗಳ ಮೂರನೇ ವಾರದಲ್ಲಿ ನಗರದಲ್ಲಿ ನಡೆಯಲಿವೆ ಮತ್ತು ಆಯ್ಕೆಯಾದ ಸ್ಕೇಟರ್‌ಗಳು ಫೆಬ್ರವರಿ 2021ರಂದು ನಡೆಯಲಿರುವ 36ನೇ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಲಿದ್ದಾರೆ. 58ನೇ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್ ಪಂದ್ಯಗಳು ಮಾರ್ಚ್ 31, 2021 ರಿಂದ ಏಪ್ರಿಲ್ 10, 2021ರ ವರೆಗೆ ಚಂಡೀಗಢ ಮೊಹಾಲಿ ಪಟಿಯಾಲದಲ್ಲಿ ಜರುಗಲಿವೆ. ಜಿಲ್ಲಾ ಮಟ್ಟದ ರೋಲರ್ ಸ್ಕೇಟಿಂಗ್‌ಗೆ ಆಯ್ಕೆ ಬಯಸುವ ಸ್ಕೇಟರ್‌ಗಳು ಇದೇ ದಿನಾಂಕ 10ರೊಳಗಾಗಿ www.indiaskate.com ನಲ್ಲಿ ನೋಂದಾಯಿಸಿಕೊಳ್ಳಬಹುದು ಅಥವಾ ಮೊಬೈಲ್ ಸಂಖ್ಯೆ 9844113656ಗೆ ಕರೆ ಮಾಡಿ, ಹೆಚ್ಚಿನ ಮಾಹಿತಿ ಪಡೆಯಬಹುದು.

## ಲಸಿಕೆಗೆ ಒಪ್ಪಿಗೆ

**(1ನೇ ಪುಟದಿಂದ)** ಕೋವಿಶೀಲ್ಡ್ ಸುರಕ್ಷಿತವಾಗಿದೆ. ಕೊರೊನಾ ತಡೆಗಾಗಿ ಸಾರ್ವಜನಿಕರು ಲಸಿಕೆ ಬಳಸಬಹುದಾಗಿದೆ ಎಂದು ಸೆರಮ್ ಇಂಡಿಯಾದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಲಸಿಕೆ ಅನುಮತಿಗಾಗಿ ಸೆರಮ್ ಇಂಡಿಯಾ ಡಿಸೆಂಬರ್ 6ರಂದು ಅರ್ಜಿ ಸಲ್ಲಿಸಿತ್ತು. ದೇಶೀಯವಾಗಿ ಅಭಿವೃದ್ಧಿ ಪಡಿಸಲಾದ ಕೊವ್ಯಾಕ್ಸಿನ್ ಲಸಿಕೆಗೆ ಅನುಮತಿ ಕೋರಿ ಹೈದರಾಬಾದ್‌ನ ಭಾರತ್ ಬಯೋಟೆಕ್ ಡಿಸೆಂಬರ್ 7ರಂದು ಅರ್ಜಿ ದಾಖಲಿಸಿತ್ತು. ಫಿಜರ್ ಕಂಪನಿಯು ಡಿಸೆಂಬರ್ 4ರಂದು ಲಸಿಕೆಗೆ ಅನುಮತಿ ಕೇಳಿ ಅರ್ಜಿ ಸಲ್ಲಿಸಿದೆ.

## ನಕಲಿ ಬಿಟ್ ಕಾಯಿನ್ : 2.5 ಕೋಟಿ ವಂಚನೆ

ನವದೆಹಲಿ, ಜ. 1 – ನಕಲಿ ಬಿಟ್‌ಕಾಯಿನ್‌ಗಳಲ್ಲಿ ಹೂಡಿಕೆ ಮಾಡುವಂತೆ ಪುಸುಲಾಯಿಸಿ ವಂಚನೆ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. 60 ವರ್ಷದ ಉಮೇಶ್ ವರ್ಮ ಎಂಬಾತ ದುಬೈನಿಂದ ಮರಳಿದಾಗ ಇಂದಿರಾ ಗಾಂಧಿ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ. ಈತ 45 ಜನರಿಗೆ 2.5 ಕೋಟಿ ರೂ.ಗಳ ವಂಚನೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ಬಿಟ್ ಕಾಯಿನ್‌ನಲ್ಲಿ ಹೂಡಿಕೆ ಮಾಡಿದಾಗ ಪ್ರತಿ ತಿಂಗಳಿಗೆ ಶೇ.20ರಿಂದ 30ರಷ್ಟು ಆದಾಯ ಬರುತ್ತದೆ ಎಂದು ನಂಬಿಸಿ ಹಣ ಪಡೆದಿದ್ದ. ಹಣ ಪಡೆಯಲು ಈತ ಪ್ಲುಟೋ ಎಕ್ಸ್ ಚೇಂಜ್ ಎಂಬ ಕಚೇರಿ ತೆರೆದಿದ್ದ. ಆದರೆ, ಜನರಿಗೆ ಹಣ ನೀಡದೇ ಈತ ಕಚೇರಿ ಮುಚ್ಚಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದ್ದಾರೆ.

## ಅಂಗವೈಕಲ್ಯ ಪರಿಹಾರ

**(1ನೇ ಪುಟದಿಂದ)** ಸಚಿವ ಜಿತೇಂದ್ರ ಸಿಂಗ್, ಈ ಬಗ್ಗೆ ಶುಕ್ರವಾರ ಆದೇಶ ಹೊರಡಿಸಲಾಗಿದೆ. ಇದು ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ ಸಿಬ್ಬಂದಿಗೆ ನೆರವಾಗಲಿದೆ ಎಂದು ತಿಳಿಸಿದ್ದಾರೆ.

ನೂತನ ಆದೇಶದಿಂದ ಕಠಿಣ ಪರಿಸ್ಥಿತಿಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಸೇವಾ ನಿಯಮಗಳಲ್ಲಿ ಎದುರಿಸುತ್ತಿರುವ ನ್ಯೂನತೆಗಳನ್ನು ನಿವಾರಿಸಲಿದೆ ಎಂದವರು ತಿಳಿಸಿದ್ದಾರೆ.

## ಧರ್ಮಸ್ಥಳದ ಅನ್ನ ಸಂತರ್ಪಣೆಗೆ ನಗರದ ದಾನಿಗಳಿಂದ ಅಕ್ಕಿ ಸಮರ್ಪಣೆ

ಧರ್ಮಸ್ಥಳದಲ್ಲಿ ನಡೆಯಲಿರುವ ಅನ್ನ ಸಂತರ್ಪಣೆಗೆ ಅಣಬೇರು ಮಂಜಣ್ಣ ಕುಟುಂಬದವರು 21ನೇ ವರ್ಷದ ಸೇವೆಯಾಗಿ ಅಕ್ಕಿ ತುಂಬಿದ ವಾಹನವನ್ನು ಕೆ.ಬಿ. ಬಡಾವಣೆಯ ಓಂ ಶ್ರೀ ಮಂಜುನಾಥಸ್ವಾಮಿ ನಿವಾಸದಿಂದ ಕಳುಹಿಸಿಕೊಡಲಿದ್ದಾರೆ.

ಈ ಸಂಬಂಧವಾಗಿ ಇಂದು ಸಂಜೆ 6.03 ಕ್ಕೆ ಅಕ್ಕಿ ತುಂಬಿದ ವಾಹನದ ಪೂಜೆ ಮತ್ತು ಶ್ರೀ ಮಂಜುನಾಥ ಸ್ವಾಮಿ ಪೂಜಾ ಕಾರ್ಯಕ್ರಮವನ್ನು ಸಂಜೆ 7.02 ಕ್ಕೆ ಹಮ್ಮಿಕೊಳ್ಳಲಾಗಿದೆ. ಶ್ರೀಮತಿ ಲಿಂ. ದ್ಯಾಮಮ್ಮ ಶ್ರೀ ಲಿಂ. ದೇವೇಂದ್ರಪ್ಪನವರ ಸವಿನೆನಪಿಗಾಗಿ ಮಗನಾದ ಅಣಬೇರು ಮಂಜಣ್ಣ, ಪತ್ನಿ ಶ್ರೀಮತಿ ಲತಾ ಮಂಜಣ್ಣ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು ಕಾರ್ಯಕ್ರಮದ ಸೇವಾಕರ್ತರಾಗಿರುತ್ತಾರೆ.

## ನಗರದ ಓಂಕಾರ ಗಣಪತಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವ

ಎಸ್.ನಿಜಲಿಂಗಪ್ಪ ಬಡಾವಣೆಯ ಓಂಕಾರ ಗಣಪತಿ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯಿಂದ ಸಂಕಷ್ಟ ಚತುರ್ಥಿ ಹಾಗೂ ಶ್ರೀ ಸ್ವಾಮಿಯ ಮತ್ತು ಬನ್ನಿ ಮಹಾಂಕಾಳಿ ಮತ್ತು ಉಣ್ಣೆ ಬಸಪ್ಪ ಸ್ವಾಮಿಯ ಕಡೇ ಕಾರ್ತಿಕೋತ್ಸವವು ಇಂದು ನಡೆಯಲಿದೆ.

## ಚಿದಂಬರ ಆರಾಧನೆಯಲ್ಲಿ ಬರವಣಿಗೆ ಸ್ಪರ್ಧೆ

ದಾವಣಗೆರೆ, ಜ.1- ನಿಟುವಳ್ಳಿ ಸಮುದಾಯ ಭವನದಲ್ಲಿ ಶ್ರೀ ಚಿದಂಬರರ ಆರಾಧನಾ ಕಾರ್ಯಕ್ರಮದಲ್ಲಿ ಉಪನ್ಯಾಸ ನಡೆಯಿತು. ದಿ. ಶೇಷಾಚಲ ಗುರುಗಳ ಸುಪುತ್ರಿ ಗುರುಚರಿತ್ರೆ ವಿವರಿಸಿದರು. ರಾಜ್ಯೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಕನ್ನಡ ಬರವಣಿಗೆ ಸ್ಪರ್ಧೆಯನ್ನು ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ಸ್ಥಾಪಕ ಕೆ.ಎನ್. ಸ್ವಾಮಿ ನಡೆಸಿಕೊಟ್ಟರು. ಮೋಹನ ದೀಕ್ಷಿತರಿಂದ ಬಹುಮಾನ ಪಡೆದರು.

ಸಮಾಜದ ಹಿರಿಯರಾದ ಕೊಂಡಜ್ಜಿ ನಾಗರಾಜ್, ವಿಜಯಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

# ಆರ್ಥಿಕ ಚೇತರಿಕೆಗೆ ಬಜೆಟ್ ಮಾರ್ಗಸೂಚಿಯ ನಿರೀಕ್ಷೆ

ನವದೆಹಲಿ, ಜ. 1 – 2020ರಲ್ಲಿ ಕೊರೊನಾದಿಂದ ತತ್ತರಿಸಿದ್ದ ಭಾರತೀಯ ಆರ್ಥಿಕ ವ್ಯವಸ್ಥೆ, ಹೊಸ ವರ್ಷದಲ್ಲಿ ಲಸಿಕೆ, ಹೆಚ್ಚಾದ ಸಾಗಣೆ ಹಾಗೂ ಕಡಿಮೆಯಾದ ತೊಡಕುಗಳಿಂದ ಚೇತರಿಸಿಕೊಳ್ಳುವ ನಿರೀಕ್ಷೆ ಇದೆ. ಆದರೆ, ಇದೆಲ್ಲದಕ್ಕೂ 2021-22ರ ಬಜೆಟ್‌ನಲ್ಲಿ ಮಾರ್ಗಸೂಚಿ ದೊರೆಯಬೇಕಿದೆ.

2019ರಲ್ಲಿ ಬ್ರಿಟನ್ ಹಿಂದೆ ಹಾಕಿದ್ದ ಭಾರತ, ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿತ್ತು. ಆದರೆ, ಕೊರೊನಾ ಆಘಾತ ಹಾಗೂ ಕಠಿಣ ಲಾಕ್‌ಡೌನ್ ಕ್ರಮಗಳಿಂದಾಗಿ ಉದ್ಯಮ ಕುಸಿದಿತ್ತು. ಗ್ರಾಹಕರ ಬಳಕೆ ಕಡಿಮೆಯಾಗುವ ಜೊತೆಗೆ ಹೂಡಿಕೆಗೂ ಹೊಡೆತ ಬಿದ್ದು, ಉದ್ಯೋಗ ನಷ್ಟವಾಗಿತ್ತು.

ಇವುಗಳೆಲ್ಲದರ ಪರಿಣಾಮದಿಂದಾಗಿ ಭಾರತದ ಆರ್ಥಿಕ ವ್ಯವಸ್ಥೆ 2020ರಲ್ಲಿ ಜಾಗತಿಕವಾಗಿ ಆರನೇ ಸ್ಥಾನಕ್ಕೆ ಕುಸಿದಿತ್ತು.

ಏಪ್ರಿಲ್ 2021ರಿಂದ ಜಾರಿಗೆ ಬರಲಿರುವ ಮುಂದಿನ ಹಣಕಾಸು ವರ್ಷದ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಲಿದ್ದಾರೆ. ಇದು ಆರ್ಥಿಕ ಚೇತರಿಕೆಯ ಆರಂಭಿಕ ಹೆಜ್ಜೆಯಾಗುವ ನಿರೀಕ್ಷೆ ಇದೆ.

ಮೂಲಭೂತ ಸೌಲಭ್ಯಗಳು ಹಾಗೂ ಸಾಮಾಜಿಕ ವಲಯಗಳಲ್ಲಿ ಮಾಡಲಾಗುವ ಹೂಡಿಕೆಗಳ ಜೊತೆಗೆ ಕೊರೊನಾದಿಂದ ತತ್ತರಿಸಿರುವ ವಲಯಗಳಿಗೆ ನೀಡುವ ನೆರವು ಆರ್ಥಿಕತೆಯ ಹಾದಿಯನ್ನು ನಿರ್ಧರಿಸಲಿವೆ.

ಕೊರೊನಾಗೆ ಮುಂಚೆಯೇ ದೇಶದ ಆರ್ಥಿಕ ವ್ಯವಸ್ಥೆ ಎಡವಲು ಆರಂಭಿಸಿತ್ತು. 2019ರಲ್ಲಿ ಜಿಡಿಪಿ ಬೆಳವಣಿಗೆ ದರ ಕಳೆದ ಹತ್ತು ವರ್ಷಗಳಲ್ಲೇ ಅತಿ ಕಡಿಮೆ ಶೇ.4.2ಕ್ಕೆ ಕುಸಿದಿತ್ತು.

ಕೊರೊನಾದಿಂದಾಗಿ ದೇಶದ ಆರ್ಥಿಕತೆ ಮೇಲೆ ಕೇಳರಿಯದ ಕರಾಳ ಛಾಯೆ ಮೂಡಿತ್ತು. ಕೊರೊನಾದಿಂದ ದೇಶದಲ್ಲಿ ಉಂಟಾದ ಸಾವಿನ ಪ್ರಮಾಣ ಅಮೆರಿಕದಂತಹ ದೇಶಗಳಿಗೆ ಹೋಲಿಸಿದರೆ ಕಡಿಮೆಯೇ ಆಗಿತ್ತು. ಆದರೆ, ಆರ್ಥಿಕತೆಯೇ ಹೆಚ್ಚು ಆಘಾತ ನೀಡಿತ್ತು.

ಏಪ್ರಿಲ್ - ಜೂನ್ ತಿಂಗಳಲ್ಲಿ ಲಾಕ್‌ಡೌನ್ ಕಾರಣದಿಂದಾಗಿ ಜಿಡಿಪಿ ಶೇ.23.9ರ ಕುಸಿತ ಕಂಡಿತ್ತು. ನಂತರದ ಚತುರ್ಥದಲ್ಲಿ ಉಂಟಾದ ಶೇ.7.5ರ ಕುಸಿತದಿಂದ ಭಾರತ ಆರ್ಥಿಕ ಹಿಂಜರಿತಕ್ಕೆ ಸಿಲುಕಿತ್ತು.

ನಿರ್ಬಂಧಗಳನ್ನು ತೆರವುಗೊಳಿಸಿದ ನಂತರ ಆರ್ಥಿಕತೆಯಲ್ಲಿ ತುಸು ಚೇತರಿಕೆ ಕಂಡರೂ, ಚಟುವಟಿಕೆಗಳು 2019ಕ್ಕಿಂತ ಸಾಕಷ್ಟು ಕಡಿಮೆಯೇ ಆಗಿತ್ತು.

ಸೀತಾರಾಮನ್ ಅವರು ಆರ್ಥಿಕ ಚೇತರಿಕೆಗಾಗಿ 29.87 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ಪ್ರಕಟಿಸಿದ್ದರು. ಆದರೆ, ಸರ್ಕಾರದ ಒಟ್ಟಾರೆ ವೆಚ್ಚದ ಪ್ರಮಾಣ ಕಡಿಮೆ ಇದೆ ಎಂದೇ ಅಭಿಪ್ರಾಯ ವ್ಯಕ್ತವಾಗಿತ್ತು.

ಸರ್ಕಾರದ ಆದಾಯದಲ್ಲಿ ತೀವ್ರ ಕುಸಿತವಾದ ಕಾರಣ, ರಾಜ್ಯಗಳಿಗೆ ನೀಡಬೇಕಾದ ಜಿ.ಎಸ್.ಟಿ. ಪಾಲು ಸಹ ಕೊಡಲು ಆಗಿರಲಿಲ್ಲ.

ಆದರೆ, ಇತ್ತೀಚಿನ ತಿಂಗಳಲ್ಲಿ ರಫ್ತು, ವಾಹನಗಳ ಮಾರಾಟ, ಇಂಧನ ಬಳಕೆ ಹಾಗೂ ಉತ್ಪಾದನಾ ಚಟುವಟಿಕೆಗಳಲ್ಲಿ ಏರಿಕೆ ಕಂಡಿದೆ. ತೀವ್ರ ಕುಸಿತದ ನಂತರ ತೀವ್ರ ಏರಿಕೆಯ ಆಶಾಭಾವನೆಯೂ ಉಂಟಾಗಿದೆ.

ಹಲವಾರು ರೇಟಿಂಗ್ ಸಂಸ್ಥೆಗಳು ಹಾಗೂ ವಿಶ್ಲೇಷಕರು ಮಾರ್ಚ್ ಒಳಗೆ ಬೆಳವಣಿಗೆ ದರ ಹೆಚ್ಚಾಗುವ ಸಾಧ್ಯತೆಯ ಬಗ್ಗೆ ತಿಳಿಸಿದ್ದಾರೆ. ರಿಸರ್ವ್ ಬ್ಯಾಂಕ್ ಸಹ ಕೊನೆಯ ಚತುರ್ಥದಲ್ಲಿ ಆರ್ಥಿಕತೆ ಬೆಳವಣಿಗೆಯ ಹಂತಕ್ಕೆ ಬರುವ ಅಂದಾಜು ಹೊಂದಿದೆ.

## ಕೋಡಿ ಕ್ಯಾಂಪ್‌ನಲ್ಲಿ ಶ್ರೀ ಗುರು ಕೊಟ್ಟೂರೇಶ್ವರ ಕಾರ್ತಿಕ



ದಾವಣಗೆರೆ, ಜ.1- ಕೊಟ್ಟೂರು ಶ್ರೀ ಗುರುಬಸವ ರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್‌ನ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಮೊನ್ನೆ ಬೆಳಿಗ್ಗೆ ಅಭಿಷೇಕ ಪೂಜೆ, ಪ್ರಸಾದ ದಾಸೋಹ ಮತ್ತು ಸಂಜೆ ಶ್ರೀ ಗುರುಕೊಟ್ಟೂರೇಶ್ವರ ಕಡೇ ಕಾರ್ತಿಕೋತ್ಸವ ದಿಪೋತ್ಸವವು ಸರ್ವ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ಕಾರ್ತಿಕೋತ್ಸವದ ಬೆಳಕಿನ ದೀಪೋತ್ಸವವು ಕೊರೊನಾ ಮಹಾಮಾರಿಯು ಬೇಗನೆ ಬಿಟ್ಟು ತೊಲಗಿ, ಸರ್ವರಿಗೂ ಆರೋಗ್ಯಭಾಗ್ಯ, ನೆಮ್ಮದಿ, ಸುಖ-ಶಾಂತಿ ನೆಲಸಲಿ ಎಂದು ಶ್ರೀ ಗುರು ಕೊಟ್ಟೂರೇಶ್ವರರಲ್ಲಿ ಪ್ರಾರ್ಥಿಸಲಾಯಿತು.



## ಕನಗೊಂಡನಹಳ್ಳಿಯಲ್ಲಿ ಇಂದು ಕಾರ್ತಿಕೋತ್ಸವ

ಕನಗೊಂಡನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಕಾರ್ತೀಕ ಮಹೋತ್ಸವ ಇಂದು ಸಂಜೆ ನಡೆಯಲಿದೆ. ಇದೇ ದಿನಾಂಕ 5ರ ಮಂಗಳವಾರ ಮಹೇಶ್ವರ ಜಾತ್ರೆ ನಡೆಯಲಿದೆ.

## ನಗರದ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜೆ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀಮತಿ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾ ನದಲ್ಲಿ ಧನುರ್ಮಾಸದ ಪೂಜಾ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಇದೇ ದಿನಾಂಕ 14ರವರೆಗೆ ನಡೆಯಲಿವೆ.

ಈ ಪೂಜಾ ಕಾರ್ಯಕ್ರಮ ಗಳಲ್ಲಿ ಪ್ರತಿದಿನ ಬೆಳಿಗ್ಗೆ 6.30ಕ್ಕೆ ಶ್ರೀ ಅಮ್ಮನವರಿಗೆ ವೈಯಕ್ತಿಕ ಪೂಜೆಗಳು ಜರುಗಲಿವೆ. ಭಾಗವಹಿಸಲಿಚ್ಛಿ ಸುವ ಸೇವಾರ್ಥಿಗಳು ತಮ್ಮ ಸೇವೆಯ ದಿನಾಂಕವನ್ನು ದೇವಸ್ಥಾನದಲ್ಲಿ ಮುಂಚಿತವಾಗಿ ನೋಂದಾಯಿಸಬೇಕು ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಇಂದು ಶ್ರೀ ಸಂಕಷ್ಟಹರ ಚತುರ್ಥಿ, ರಾತ್ರಿ 9.13ಕ್ಕೆ ಚಂದ್ರದರ್ಶನ, ರಾತ್ರಿ 7.30ಕ್ಕೆ ಶ್ರೀ ಮಹಾ ಗಣಪತಿ ಪೂಜೆ, ಗಣ ಹೋಮ, ಮಹಾಮಂಗಳಾರತಿ ಜರುಗಲಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ರೆಹಮಾನ್‌ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ ಕ್ವಾರ್ಟರ್ಸ್ (ಬೇತೂರು ರಸ್ತೆ) ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು. ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಕೆ.ಆರ್. ರಸ್ತೆ, ಗಡಿಯಾರ ಕಂಬ, ಬಿ.ಟಿ. ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್‌ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮೀ ರಸ್ತೆ ಸ್ವಲ್ಪ ಭಾಗ, ವಸಂತ ಟಾಕೀಸ್ ಸ್ವಲ್ಪಭಾಗ ಹಾಗೂ ಇತರೆ ಪ್ರದೇಶಗಳು.

ಭಾಷಾ ನಗರ 1 ರಿಂದ 17ನೇ ಕ್ರಾಸ್, ರಿಂಗ್‌ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾವುಲ್ಲಾ ಮುಸ್ತಾಫ ನಗರ, ರಜಾಕ್ ಸರ್ಕಲ್, ಭಾಷನಗರ ಮುಖ್ಯರಸ್ತೆ, ಸುತ್ತಮುತ್ತ ಬೀಡಿ ಲೇಔಟ್, ಶಿವ ನಗರ, ಇಎಸ್‌ಐಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷಾ ನಗರ ಮುಖ್ಯರಸ್ತೆ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸ ಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಮ್ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ :** ದಾವಣಗೆರೆ ತಾಲ್ಲೂ ಕಿನ ಅತ್ತಿಗೆರೆ, ಆನಗೋಡು, ಮಾಯಕೊಂಡ ವಿದ್ಯುತ್ ವಿತರಣಾ ಕೇಂದ್ರ ಗಳಿಂದ ಸರಬರಾಜಾಗುವ ಎಲ್ಲಾ ಗ್ರಾಮಗಳಲ್ಲಿ ಹಾಗೂ ಹೊಳಲ್ಕೆರೆ ತಾಲ್ಲೂ ಕಿನ ಸಾಸಲುಹಳ್ಳ, ಚಿಕ್ಕಜಾಜೂರು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮತ್ತು ಕುಟ್ಟಿಗೇಹಳ್ಳಿ ವಾಟರ್ ವರ್ಕ್ಸ್ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಎಲೆಬೇತೂರಿನಲ್ಲಿ ಇಂದು ಕಾರ್ತಿಕ

ಎಲೆಬೇತೂರು ಗ್ರಾಮದ ಪುಟಗನಾಳು ಸಮೀಪ ಇರುವ ನೂತನವಾಗಿ ಕಟ್ಟಿಸಿರುವ ಶ್ರೀ ಬಂಡೆ ರಂಗಪ್ಪ ದೇವರ ದೇವ ಸ್ಥಾನದಲ್ಲಿ ಪ್ರಥಮ ವರ್ಷದ ಕಾರ್ತಿಕೋತ್ಸವ ಇಂದು ಸಂಜೆ 6 ಗಂಟೆಗೆ ನಡೆಯಲಿದೆ. ಗ್ರಾಮದ ಭಕ್ತಾದಿಗಳಿಂದ ಶ್ರೀ ಬಂಡೆ ರಂಗಪ್ಪ ದೇವರಿಗೆ ಪೂಜೆ ಸಲ್ಲಿಸಿ, ಕಾರ್ತಿಕ ಹಚ್ಚುವರು. ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಮಾಡಲಾಗುವುದು.

## ಶಿಬಾರದ ಮೈಲಾರ ಲಿಂಗೇಶ್ವರ ಕಾರ್ತಿಕ

ದಾವಣಗೆರೆ, ಜ.1- ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಕ್ಷೇತ್ರ ಶಿಬಾರದ ಶ್ರೀ ಮೈಲಾರಲಿಂಗೇಶ್ವರ ದೇವರ ಕಡೇ ಕಾರ್ತಿಕೋತ್ಸವ ಮತ್ತು ಲಕ್ಷ ದೀಪೋತ್ಸವ ಇದೇ ದಿನಾಂಕ 10 ರ ಸಂಜೆ 7.30 ಕ್ಕೆ ಬಾಳೆಯ ದಿಂಡಿ ನಿಂದ ಅಲಂಕೃತವಾದ ಕದಲಿ ಪೂಜೆಯೊಂದಿಗೆ ನಡೆಯಲಿದೆ.

## ಆವರಗೊಳ್ಳದಲ್ಲಿ ಇಂದು ಕಾರ್ತಿಕ ದೀಪೋತ್ಸವ



ಶ್ರೀ ಕ್ಷೇತ್ರ ಆವರಗೊಳ್ಳ ಪುರವರ್ಗ ಹಿರೇಮಠದಲ್ಲಿ ಶ್ರೀಗಳ ಸಾನ್ನಿಧ್ಯದಲ್ಲಿ ಶ್ರೀ ಮಠದ ವಿಷಮರ್ಧನ ಸಂಜೀವಿನಿ ಗದ್ದುಗೆಯ 47 ನೇ ವರ್ಷದ ವಾರ್ಷಿಕೋತ್ಸವ ಹಾಗೂ ಲಿಂ. ರಂಭಾಪುರಿ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಸ್ವಾಮೀಜಿ ಪುಣ್ಯಸ್ಮರಣೆ ಅಂಗವಾಗಿ ಇಂದು ಸಂಜೆ 8 ಗಂಟೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಕಾರ್ತಿಕ ದೀಪೋತ್ಸವ ಹಾಗೂ ನಾಳೆ ದಿನಾಂಕ 3ರ ಭಾನುವಾರ ಪ್ರಾತಃಕಾಲ ಶಿವದೀಕ್ಷಾ ಹಾಗೂ ಬೆಳಿಗ್ಗೆ 9 ಗಂಟೆಗೆ ಲಿಂ.ಗುರುಗಳ ಭಾವಚಿತ್ರದ ಅಡ್ಡಪಲ್ಲಕ್ಕಿ ಉತ್ಸವವು ಜರುಗುವುದು. ನಂತರ ಪ್ರಸಾದ ವಿತರಣೆ ನಡೆಯಲಿದೆ.





ಮಣಿಪಾಲ್ ಹಾಸ್ಪಿಟಲ್ ವೈಟ್‌ಫೀಲ್ಡ್ ನುರಿತ ವೈದ್ಯರೊಡನೆ
ರವಿ ನರ್ಸಿಂಗ್ ಹೋಂ, ದಾವಣಗೆರೆಯಿಂದ
ವಿಡಿಯೋ ಸಮಾಲೋಚನೆ ಲಭ್ಯವಿದೆ

ಕಾರ್ಡಿಯಾಲಜಿ ಕನ್ಸಲ್ಟೆಂಟ್ :
ಡಾ. ಪ್ರದೀಪ್ ಹಾರನಹಳ್ಳಿ
ಎಂಬಿಬಿಎಸ್, ಎಮ್‌ಡಿ, ಡಿಎಮ್ - ಕಾರ್ಡಿಯಾಲಜಿ
ಕನ್ಸಲ್ಟೆಂಟ್ ಇಂಟರ್‌ವೆನ್ಶನಲ್ ಕಾರ್ಡಿಯಾಲಜಿಸ್ಟ್
ಮಣಿಪಾಲ್ ಆಸ್ಪತ್ರೆ, ವೈಟ್‌ಫೀಲ್ಡ್
ಪ್ರತಿ ಗುರುವಾರ ಬೆಳಿಗ್ಗೆ 10 ರಿಂದ 12

ಆರ್ಥೋಪೆಡಿಕ್ ಕನ್ಸಲ್ಟೆಂಟ್ :
ಡಾ. ಗಿರೀಶ ಬಿ.ಎ.
ಎಂಬಿಬಿಎಸ್, ಎಮ್‌ಎಸ್ - ಆರ್ಥೋಪೀಡಿಕ್ಸ್
ಕನ್ಸಲ್ಟೆಂಟ್ ಆರ್ಥೋಪೀಡಿಕ್ ಸರ್ಜನ್
ಮಣಿಪಾಲ್ ಆಸ್ಪತ್ರೆ, ವೈಟ್‌ಫೀಲ್ಡ್
ಪ್ರತಿ ಮಂಗಳವಾರ ಬೆಳಿಗ್ಗೆ 10 ರಿಂದ 12

ಅಪಾಯಿಂಟ್‌ಮೆಂಟ್‌ಗಾಗಿ ಕರೆಮಾಡಿ :
ದೂರವಾಣಿ : 08192 - 277750


## ನಗರದಲ್ಲಿ ಇಂದು ಕವನ ಸಂಕಲನ ಲೋಕಾರ್ಪಣೆ

ದಾವಣಗೆರೆ, ಜ.1- ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಗಮ್ಯ ಪ್ರಕಾಶನದ ಸಂಯುಕ್ತಾಶ್ರ ಯದಲ್ಲಿ ನಾಳೆ ದಿನಾಂಕ 2ರ ಶನಿವಾರ ಸಂಜೆ 4 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಕವಿ ಸುರೇಂದ್ರ ವಾಂಕ್ಡೋತ್ ಅವರ 'ಕಾಡು ಮಲ್ಲಿಗೆ' ಕವನ ಸಂಕಲನ ಲೋಕಾರ್ಪಣೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜು ಅಧ್ಯಕ್ಷತೆ ವಹಿಸುವರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ.ಆರ್. ಪರಮೇಶ್ವರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹಿರಿಯ ಸಾಹಿತಿ ಡಾ. ವಸಂತಕುಮಾರ ಪೆರ್ಲ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಕೃತಿ ವಿಶ್ಲೇಷಣೆ ಮಾಡಲಿದ್ದಾರೆ ಎಂದು ಸಂಗೀತ ಕಲಾವಿದ ಎಂ. ದ್ವಾರಕೀಶ್ ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಜಿ. ಕೊಟ್ರೇಶ್, ಬದ್ಯಾನಾಯ್ಕ, ಪ್ರಕಾಶ್ ಕೊಡಗ ನೂರ್, ಡಾ. ಎನ್. ಚಂದ್ರೇಗೌಡ, ಎಂ. ಸತೀಶ್, ಬಿ.ಆರ್. ಮಂಜುನಾಥ್, ಹೆಚ್. ಕೃಷ್ಣ ನಾಯ್ಕ್, ಜಿ.ಎಂ.ಆರ್. ಆರಾಧ್ಯ, ಕೆ. ರಾಜೇಶ್ವರಿ ಸೇರಿ ದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಪತ್ರಿಕಾಗೋಷ್ಠಿ ಯಲ್ಲಿ ಸಂಗೀತ ಶಿಕ್ಷಕ ಗಿರೀಶ್, ಸವಿತಾ ಕೂಲಂಬಿ ಇದ್ದರು.

## ನಗರದ ರಾಮ ಮಂದಿರದಲ್ಲಿ ಇಂದು ಕಾರ್ತಿಕ

ಪಿ.ಜೆ. ಬಡಾವಣೆ ಶ್ರೀ ರಾಮ ದೇವಸ್ಥಾನದಲ್ಲಿ ಇಂದು ಸಂಜೆ 7.30 ಕ್ಕೆ ಕಾರ್ತಿಕ ಏರ್ಪಡಿಸಲಾಗಿದೆ. ಭಕ್ತಾದಿಗಳು ಆಗಮಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಲು ಕೋರಲಾಗಿದೆ.


ಜಿಗಳಿ ಮತದಾರರಿಗೆ ಕೃತಜ್ಞತೆಗಳು



ಹರಿಹರ ತಾ, ಜಿಗಳಿ ಗ್ರಾ.ಪಂ ಚುನಾವಣೆಯಲ್ಲಿ
ಜಿಗಳಿ ಗ್ರಾಮದ 3ನೇ ವಾರ್ಡಿನ ಸಾಮಾನ್ಯ ಕ್ಷೇತ್ರದಿಂದ
ಸ್ಪರ್ಧಿಸಿದ್ದ ನನ್ನನ್ನು ಅಧಿಕ ಮತಗಳಿಂದ ಆಯ್ಕೆ ಮಾಡಿದ
ವಾರ್ಡಿನ ಸಮಸ್ತ ಮತದಾರ ಬಾಂಧವರಿಗೆ ಮತ್ತು
ನನ್ನ ಗೆಲುವಿಗೆ ಹಗಲಿರುಳು ಶ್ರಮಿಸಿದ
ಎಲ್ಲಾ ಮುಖಂಡರಿಗೆ, ಕಾರ್ಯಕರ್ತರಿಗೆ, ಹಿತೈಷಿಗಳಿಗೆ
ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.
ವೈ.ಆರ್. ಚೇತನ್ ಕುಮಾರ್
ಸದಸ್ಯರು, 3ನೇ ವಾರ್ಡ್
ಜಿಗಳಿ ಗ್ರಾಮ ಪಂಚಾಯತಿ



ಹೃತ್ಪೂರ್ವಕ ಕೃತಜ್ಞತೆಗಳು



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾಗಿ ಸ್ಪರ್ಧಿಸಿ, ಆಯ್ಕೆಯಾದ ಎಲ್ಲಾ ಗ್ರಾಮ ಪಂಚಾಯಿತಿಗಳ ಸದಸ್ಯರುಗಳಿಗೂ, ಮತದಾನ ಮಾಡಿದ ಎಲ್ಲಾ ಮತದಾರ ಬಾಂಧವರಿಗೂ, ಇವರುಗಳನ್ನು ಆಯ್ಕೆ ಮಾಡಲು ಶ್ರಮಿಸಿದ ಬಿಜೆಪಿ ಕಾರ್ಯಕರ್ತರುಗಳಿಗೂ, ಎಲ್ಲಾ ಮುಖಂಡರುಗಳಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

+ ವೀರೇಂದ್ರ ಪಾಟೀಲ್, ಬಿಜೆಪಿ ಮುಖಂಡರು
+ ಕೆ. ಶಿವಮೂರ್ತಪ್ಪ, ತಾ.ಪಂ. ಮಾಜಿ ಸದಸ್ಯರು
+ ಎಸ್. ಬಸವರಾಜಪ್ಪ, ಬಿಜೆಪಿ ಮುಖಂಡರು
+ ರಾಯಪ್ಪ ಶಂಭುಲಿಂಗಪ್ಪ, ಎಸ್.ಎಸ್.ಎಸ್. ಅಧ್ಯಕ್ಷರು, ಶಿರಮಗೊಂಡನಹಳ್ಳಿ
+ ಎ.ಹೆಚ್. ಚನ್ನಬಸಪ್ಪ + ಜಿ.ಎ. ಮಂಜುನಾಥ,
+ ಎ.ಬಿ. ಕರಿಬಸಪ್ಪ + ಎಸ್.ಆರ್. ಈಶ್ವರ್‌ಕುಮಾರ್

ಎ.ಎಂ. ಮಂಜುನಾಥ
ಅಧ್ಯಕ್ಷರು, ಬಿಜೆಪಿ ರೈತ ಮೋರ್ಚಾ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ.



ಧಾರ್ಮಿಕ ದತ್ತಿ ಇಲಾಖೆ ಪಿ.ಬಿ. ರಸ್ತೆ,
ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಡೇ ಕಾರ್ತಿಕೋತ್ಸವ

ದಾವಣಗೆರೆ ನಗರದ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಡೇ ಕಾರ್ತಿಕೋತ್ಸವ ದಿ:3-01-2021ರ ಭಾನುವಾರ ರಾತ್ರಿ 8 ಗಂಟೆಗೆ ಸರಿಯಾಗಿ ನಡೆಯಲಿದೆ. ಸಕಲ ಸದ್ಭಕ್ತರು ಸಕಾಲಕ್ಕೆ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕಾರ್ಯದರ್ಶಿ ಜಿ.ಕೆ. ಕೊಟ್ರಬಸಪ್ಪ ಮನವಿ ಮಾಡಿದ್ದಾರೆ.





ಹೃತ್ಪೂರ್ವಕ ಕೃತಜ್ಞತೆಗಳು

ದಾವಣಗೆರೆ ತಾಲ್ಲೂಕು ಗೋಪನಾಳು ಗ್ರಾಮ ಪಂಚಾಯ್ತಿಗೆ ಎಸ್ಸಿ ಮಹಿಳೆ ಮೀಸಲು ಕ್ಷೇತ್ರದಿಂದ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಗೋಪನಾಳು ಗ್ರಾಮದ ಹಿರಿಯರಿಗೂ, ಮುಖಂಡರಿಗೂ, ಕಾರ್ಯಕರ್ತರಿಗೂ ಕೃತಜ್ಞತೆಗಳು. ನಾನು ಅವಿರೋಧವಾಗಿ ಆಯ್ಕೆಯಾಗಲು ಪ್ರತ್ಯಕ್ಷ - ಪರೋಕ್ಷವಾಗಿ ಸಹಕರಿಸಿದ ಗೋಪನಾಳು ಗ್ರಾಮಸ್ಥರಿಗೂ, ಸರ್ವರಿಗೂ ಹೃದಯಪೂರ್ವಕ ಧನ್ಯವಾದಗಳು.



ಆರ್. ರೂಪಾ ನಾಗರಾಜ್
ಸದಸ್ಯರು, ಗೋಪನಾಳು ಗ್ರಾಮ ಪಂಚಾಯ್ತಿ



ಹೃತ್ಪೂರ್ವಕ ಕೃತಜ್ಞತೆಗಳು

ದಾವಣಗೆರೆ ತಾ।। ನರಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾವಿಹಾಳ್ ಗ್ರಾಮದಲ್ಲಿ ಸ್ಪರ್ಧಿಸಿದ್ದ ನಮಗೆ ಹೆಚ್ಚಿನ ಮತ ನೀಡಿ ಆಯ್ಕೆಯಾಗಲು ಸಹಕರಿಸಿದ ಬಾವಿಹಾಳ್ ಗ್ರಾಮದ ಎಲ್ಲಾ ಮತದಾರ ಬಂಧುಗಳಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.


ಕಲ್ಲೇಶಪ್ಪ
ಗ್ರಾ.ಪಂ ಸದಸ್ಯರು


ಮೀನಾಕ್ಷಿ
ಗ್ರಾ.ಪಂ ಸದಸ್ಯರು


ಅಕ್ಕಮ್ಮ
ಗ್ರಾ.ಪಂ ಸದಸ್ಯರು




ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ
ನಂದಿಗುಡಿ ರಸ್ತೆ, ಮಲೇಬೆನ್ನೂರು.- 577530 ಹರಿಹರ ತಾ।।

ಇದರ ಐದು (5) ವರ್ಷಗಳ ಅವಧಿಗೆ ಜರುಗುವ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ-2021



ಆಂಜನೇಯ ಕೆ.ಹೆಚ್. ಕೊಕ್ಕನೂರು. | ಗುರುಶಾಂತಯ್ಯ ಕೆ.ಜಿ. ನಂದಿಗುಡಿ. | ಚಂದ್ರಶೇಖರಪ್ಪ ಕೆ.ಜಿ. ಜಿ. ಬೇವಿನಹಳ್ಳಿ | ನಾಗರಾಜ್ ಎಂ.ವಿ. ಜಿಗಳಿ. | ಪರಮೇಶ್ವರಪ್ಪ ಹೆಚ್.ಟಿ. ಹಳ್ಳಿಹಾಳ್ | ಬಸವರಾಜಪ್ಪ ಬಿ . ಜಿಗಳಿ | ರವಿಸ್ವಾಮಿ ಎ. ವ. ಬಸವಾಪುರ



ರಂಗಪ್ಪ ಬಿ.ಎಸ್ ಜಿ. ಬೇವಿನಹಳ್ಳಿ | ರಾಜು ಎನ್.ಎಂ. ನಂದಿತಾವರೆ | ಶಕುಂತಲಮ್ಮ ಬಸವರಾಜ್ ಪಾಳ್ಯ | ಶೇಖರಪ್ಪ ಡಿ. ಕೊಕ್ಕನೂರು | ಸಿದ್ದಪ್ಪ ಡಿ.ಜಿ. ಕೊಕ್ಕನೂರು | ಹನುಮಗೌಡ ಎಸ್.ಜಿ ಹಿಂಡಸಘಟ್ಟ

ಸಂಘದ ಮಾನ್ಯ ಷೇರುದಾರ ಮತದಾರ ಬಾಂಧವರೇ,
ದಿನಾಂಕ : 03.01.2021ನೇ ಭಾನುವಾರ ನಡೆಯಲಿರುವ ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ, ಮಲೇಬೆನ್ನೂರು ಇದರ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ನಾವುಗಳು ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ತಾವುಗಳು ದಯಮಾಡಿ ಈ ಕೆಳಗೆ ಕಾಣಿಸಿದ ನಮ್ಮ ಗುರುತುಗಳಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ, ನಮ್ಮನ್ನು ಪ್ರಚಂಡ ಬಹುಮತದೊಂದಿಗೆ ಜಯಶೀಲರನ್ನಾಗಿ ಮಾಡಬೇಕಾಗಿ ಈ ಮೂಲಕ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

ಮಾದರಿ ಮತ ಪತ್ರ

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | | ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|---|---|---|---|
| 02 | ಆಂಜನೇಯ ಕೆ.ಹೆಚ್. ಸಾಮಾನ್ಯ | | | 16 | ರಂಗಪ್ಪ ಬಿ.ಎಸ್. ಸಾಮಾನ್ಯ | | |
| 04 | ಗುರುಶಾಂತಯ್ಯ ಕೆ.ಜಿ. ಸಾಮಾನ್ಯ | | | 17 | ರಾಜು ಎನ್.ಎಂ. ಸಾಮಾನ್ಯ | | |
| 05 | ಚಂದ್ರಶೇಖರಪ್ಪ ಕೆ.ಜಿ. ಸಾಮಾನ್ಯ | | | 22 | ಶಕುಂತಲಮ್ಮ ಬಸವರಾಜ್ ಮಹಿಳಾ ಮೀಸಲು | | |
| 06 | ನಾಗರಾಜ್ ಎಂ.ವಿ. ಸಾಮಾನ್ಯ | | | 25 | ಶೇಖರಪ್ಪ ಡಿ. ಹಿಂದುಳಿದ ವರ್ಗ "ಎ" | | |
| 08 | ಪರಮೇಶ್ವರಪ್ಪ ಹೆಚ್.ಟಿ. ಸಾಮಾನ್ಯ | | | 28 | ಸಿದ್ದಪ್ಪ ಡಿ.ಜಿ. ಪರಿಶಿಷ್ಟ ಪಂಗಡ ಮೀಸಲು | | |
| 10 | ಬಸವರಾಜಪ್ಪ ಬಿ. (ಬಸವನಗೌಡ್ರು) ಸಾಮಾನ್ಯ | | | 29 | ಹನುಮಗೌಡ ಎಸ್.ಜಿ. ಸಾಮಾನ್ಯ | | |
| 15 | ರವಿಸ್ವಾಮಿ ಎ. ಸಾಮಾನ್ಯ | | | | | | |

ಮತದಾನ: ದಿನಾಂಕ : 03.01.2021ನೇ ಭಾನುವಾರ, ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00 ಘಂಟೆಯವರೆಗೆ
ಸ್ಥಳ : ಮಾಲತೇಶ ಪಬ್ಲಿಕ್ ಸ್ಕೂಲ್ ಪ್ರಾಥಮಿಕ ಶಾಲೆ, ಸಂತೇ ರಸ್ತೆ, ಮಲೇಬೆನ್ನೂರು.
ವಿ ಸೂ:" ಮತದಾರರು ಮತದಾನಕ್ಕೆ ಸಂಘದ ಗುರುತಿನ ಚೀಟಿಯೊಂದಿಗೆ ಬರಬೇಕಾಗಿ ವಿನಂತಿ. ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಂಡು ಬನ್ನಿ"

# ಉತ್ತಮ ಕನಸಿನೊಂದಿಗೆ ಸಮಾಜದ ಆಸ್ತಿಯಾಗಬೇಕು : ಜಿಲ್ಲಾಧಿಕಾರಿ ಆಶಯ



ದಾವಣಗೆರೆ, ಜ.1- ಜ್ಞಾನಕ್ಕೆ ಸಮನಾದದ್ದು ಬೇರೆ ಯಾವುದೂ ಇಲ್ಲ. ಆದ್ದರಿಂದ ಜ್ಞಾನದ ಬೆನ್ನು ಹತ್ತಬೇಕು ಎಂದು ಜಿಲ್ಲಾಧಿಕಾರಿ ಮಹಾಂತ ಬೀಳಗಿ ಮಕ್ಕಳಿಗೆ ಕಿವಿ ಮಾತು ಹೇಳಿದರು.

ಬಡತನದಿಂದಾಗಿ ಜಾತ್ರೆಯಲ್ಲಿ ಉತ್ತುತ್ತಿ ಮಾರುತ್ತಿದ್ದ ನಾನು, ಆಗಲೇ ಕೆಂಪು ದೀಪದ ಕಾರು ಹತ್ತುವ ಕನಸು ಕಂಡಿದ್ದೆ. ಹಣದ ಬೆನ್ನತ್ತದೆ ಜ್ಞಾನದ ಬೆನ್ನು ಹತ್ತಿದ್ದರಿಂದಲೇ ನನಗೆ ವಿದ್ಯೆಯ ಜೊತೆ ಎಲ್ಲಾ ಕನಸೂ ನನಸಾಗಿವೆ ಎಂದರು.

ಕನಸು ಕಾಣಲು ಮಿತಿ ಇಲ್ಲ. ಆದ್ದರಿಂದ ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನೇ ಕಾಣಬೇಕು. ಅದರ ಬಗ್ಗೆಯೇ ವಿಚಾರ ಮಾಡುತ್ತಿರಬೇಕು. ಆಗ ಮುಂದೊಂದು ದಿನ ನಮಗೆ ಗೊತ್ತಿಲ್ಲದಂತೆಯೇ ನಮ್ಮ ಕನಸುಗಳು ನನಸಾಗುತ್ತವೆ ಎಂದರು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಹತ್ತು ತಿಂಗಳು ಶಾಲೆಗೆ ಆಗಮಿಸಲು ಸಾಧ್ಯವಾಗದ ನೀವು, ಇನ್ನೂ ಉಳಿದ ಮೂರ್ನಾಲ್ಕು ತಿಂಗಳು ಪ್ರತಿ ಕ್ಷಣವನ್ನೂ ವ್ಯಯ ಮಾಡದೆ ಓದಬೇಕು. ಎಸ್ಸೆಸ್ಸೆಲ್ಸಿ ಹಂತವು ಜೀವನದ ಪ್ರಮುಖ ಘಟ್ಟವಾಗಿದೆ.

ಈ ಸಮಯದಲ್ಲಿ ನೀವು ಕಾಣುವ ಕನಸುಗಳು ನಿಜವಾಗುವ ಸಾಧ್ಯತೆ ಹೆಚ್ಚು. ಆದ್ದರಿಂದ ಉತ್ತಮ ಕನಸು ಹಾಗೂ ಗುರಿಯೊಂದಿಗೆ ಸಮಾಜದ ಆಸ್ತಿಯಾಗಿ ಎಂದು ಆಶಿಸಿದರು.

ಇದೇ ವೇಳೆ ಉದ್ಯಮಿ ಎಸ್.ಜಿ. ಉಳುವಯ್ಯ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ನೀಡಿ, ಶಾಲೆಗೆ 25 ಸಾವಿರ ರೂ. ದತ್ತಿ ನಿಧಿ ಕೊಡುವುದಾಗಿ ಹೇಳಿದರು. ಜಿಲ್ಲಾಧಿಕಾರಿಗಳು ತಾವೂ ಸಹ ಶಾಲೆಗೆ 25 ಸಾವಿರ ರೂ. ದತ್ತಿ ನಿಧಿ ನೀಡುವುದಾಗಿ ಭರವಸೆ ನೀಡಿದರು.

ಪಾಲಿಕೆ ಸದಸ್ಯೆ ಸವಿತಾ ಗಣೇಶ್ ಹುಲ್ಮನಿ ಹಾಗೂ ಗಣೇಶ್ ಹುಲ್ಮನಿ ದಂಪತಿ ವಿದ್ಯಾರ್ಥಿಗಳಿಗೆ ಡಿಕ್ಷನರಿ ನೀಡಿದರಲ್ಲದೆ, 1 ಲ್ಯಾಪ್ ಟಾಪ್ ಹಾಗೂ ಶಾಲೆಗೆ 50 ಸಾವಿರ ರೂ. ದತ್ತಿ ನಿಧಿ ನೀಡುವುದಾಗಿಯೂ ಹೇಳಿದರು. ದಾನಿಗಳ ಕಾರ್ಯವನ್ನು ಜಿಲ್ಲಾಧಿಕಾರಿ ಶ್ಲಾಘಿಸಿದರು.

ಡಿಡಿಪಿಐ (ಆಡಳಿತ) ಸಿ.ಆರ್. ಪರಮೇಶ್ವರಪ್ಪ, ಡಿಡಿಪಿಐ (ಅಭಿವೃದ್ಧಿ) ಲಿಂಗರಾಜು, ದಕ್ಷಿಣ ಬಿಇಒ ನಿರಂಜನಮೂರ್ತಿ, ಉಮಾ ಪ್ರಕಾಶ್, ಮಂಜುನಾಥ ಸ್ವಾಮಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಸುರೇಶ್, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ಚಂದ್ರಪ್ಪ, ಎಸ್‌ಡಿಎಂಸಿ ಅಧ್ಯಕ್ಷ ತಿಪ್ಪೇಸ್ವಾಮಿ ಹಾಗು ಇತರರು ಈ ಸಂದರ್ಭದಲ್ಲಿದ್ದರು.

# ನಾಯಕತ್ವದ ಗೊಂದಲವಿಲ್ಲ, ಅಭಿವೃದ್ಧಿ ಕಡೆ ಗಮನವಿರಲಿ : ಸಿಎಂ ಬಿಎಸ್‌ವೈ ಸೂಚನೆ



ಬೆಂಗಳೂರು, ಜ. 1 - ನಾಯಕತ್ವದಲ್ಲಿ ಗೊಂದಲವಿಲ್ಲ, ಅಭಿವೃದ್ಧಿ ಕಡೆ ಗಮನಹರಿಸಿ ಎಂದು ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಇಂದಿಲ್ಲಿ ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನಗರದ ಹೊರ ವಲಯದ ರೆಸಾರ್ಟ್‌ನಲ್ಲಿ ವರ್ಷಾಚರಣೆ ಮೊದಲ ದಿನದಂದು ಮುಖ್ಯಕಾರ್ಯದರ್ಶಿ, ಪ್ರಧಾನಕಾರ್ಯದರ್ಶಿ, ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳಿಗೆ ಔತಣಕೂಟ ಏರ್ಪಡಿಸಿದ್ದ ಮುಖ್ಯಮಂತ್ರಿಯವರು, ಇದೇ ವೇಳೆ ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಚಾಟಿ ಬೀಸಿದ್ದಾರೆ.

ನಾಲ್ಕನೇ ಬಾರಿಗೆ ಅಧಿಕಾರ ವಹಿಸಿಕೊಂಡ ದಿನದಿಂದ ಇಲ್ಲಿಯವರೆಗೂ ಸವಾಲುಗಳನ್ನೇ ಎದುರಿಸಿ ಆಡಳಿತ ನಡೆಸಿದ್ದೇನೆ. ಇದಕ್ಕೆ ನಿಮ್ಮ ಸಹಕಾರವೂ ದೊರೆತಿದೆ. ರಾಜಕೀಯದಲ್ಲಿ ಮೇಲಾಟಗಳು ಇರುತ್ತವೆ. ಹಾಗೆಂದು ಸರ್ಕಾರ ಏನಾಗುತ್ತದೆಯೋ ಎಂಬ ಮನಸ್ಥಿತಿಗೆ ಬರಬೇಡಿ. ನಾನು ಗಟ್ಟಿಯಾಗಿದ್ದೇನೆ. ಪಕ್ಷ ಮತ್ತು ಶಾಸಕರು ನನ್ನ ಬೆಂಬಲಕ್ಕಿದ್ದಾರೆ. ನೀವು ಇದರ ಬಗ್ಗೆ ಚಿಂತೆ ಬಿಟ್ಟು ಅಭಿವೃದ್ಧಿ ಕಡೆ ಗಮನಹರಿಸಿ ಎಂದಿದ್ದಾರೆ.

ಔತಣ ಕೂಟಕ್ಕೂ ಮುನ್ನ ಮತ್ತು ಆನಂತರ ಅಧಿಕಾರಿಗಳ ಜೊತೆ ಸುದೀರ್ಘ ಸಭೆ ನಡೆಸಿದ ಮುಖ್ಯಮಂತ್ರಿಗಳು ಅವರ ಸಲಹೆಗಳನ್ನು ಪಡೆದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಈ ತಿಂಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಇದಕ್ಕೂ ಮುನ್ನ ರಾಜ್ಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಅರುಣ್‌ಸಿಂಗ್ ನಾಳೆ ಶಿವಮೊಗ್ಗದಲ್ಲಿ ಕೋರ್ ಕಮಿಟಿ ಸಭೆ ನಡೆಸುತ್ತಿದ್ದಾರೆ.

ಇದೆಲ್ಲದಕ್ಕೂ ಮಿಗಿಲಾಗಿ ಪಕ್ಷದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಇದೇ ವಾರ ಸಭೆಯನ್ನು ಕರೆದಿದ್ದಾರೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡೇ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಸಭೆ ನಡೆಸುವುದಕ್ಕೂ ಮುನ್ನ ನಿನ್ನೆ ಸುದ್ದಿಗೋಷ್ಠಿಯಲ್ಲಿ ಉಳಿದ ಅವಧಿಗೂ ನಾನೇ ಸಿಎಂ ಎಂದು ಅಧಿಕಾರಿಗಳಿಗೆ ಸಂದೇಶ ಕಳುಹಿಸಿದ್ದರು.

ಫೆಬ್ರವರಿ 3ನೇ ವಾರದಲ್ಲಿ 2021-22 ರ ಮುಂಗಡ ಪತ್ರ ಮಂಡನೆ ಮಾಡುತ್ತೇನೆ. ಈ ವೇಳೆಗೆ ಕಾರ್ಯಕ್ರಮಗಳು ಸಿದ್ಧವಾಗಬೇಕೆಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಆದೇಶಿಸಿದ್ದಾರೆ.

ಸಂಕಷ್ಟದ ನಡುವೆಯೂ ನಾವು ಹೊಸ ಕಾರ್ಯಕ್ರಮಗಳನ್ನು ನೀಡಬೇಕು. ಶಾಸಕರು ಕ್ಷೇತ್ರದಲ್ಲಿ ಅಭಿವೃದ್ಧಿ ಆಗುತ್ತಿಲ್ಲ ಎನ್ನುತ್ತಿದ್ದಾರೆ. ಈ ಆರ್ಥಿಕ ವರ್ಷದಲ್ಲೇ ಒಂದಿಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿದೆ. ನಾನು ಶಾಸಕರ ಸಭೆ ಕರೆದಿದ್ದೇನೆ. ಅವರ ಅಭಿಪ್ರಾಯಗಳನ್ನು ಆಲಿಸಿ, ನಿಮಗೆ ವರದಿ ನೀಡುತ್ತೇನೆ. ಅವುಗಳನ್ನು ಚಾಚೂ ತಪ್ಪದೇ ಅನುಷ್ಠಾನಕ್ಕೆ ತನ್ನಿ ಎಂದು ತಿಳಿಸಿದ್ದಾರೆ.

ನಾವು ಸಂಪನ್ಮೂಲಕ್ಕೆ ಒತ್ತು ನೀಡುವುದರ ಜೊತೆಗೆ ಕೇಂದ್ರದ ಅನುದಾನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ನೀವು ಕೆಲ ಅಧಿಕಾರಿಗಳ ಕಿವಿ ಹಿಂಡಿ ಕೆಲಸ ಮಾಡಿಸಿ, ನಿಮ್ಮ ಆಡಳಿತದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ನಿಮ್ಮ ಸಲಹೆ, ಸೂಚನೆಗಳಿಗೆ ಮನ್ನಣೆ ನೀಡುತ್ತೇನೆ. ಆದರೆ ನನಗೆ, ರಾಜ್ಯಕ್ಕೆ ಗೌರವ ತರುವಂತಹ ಕೆಲಸಗಳಾಗಬೇಕು ಎಂದಿದ್ದಾರೆ.

ಈ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು, ಅಭಿವೃದ್ಧಿಗೆ ಎದುರಾಗಿರುವ ಸಂಕಷ್ಟಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಆರ್ಥಿಕ ಸ್ಥಿತಿಗತಿಗಳ ಬಗ್ಗೆಯು ಪೂರ್ಣ ಚಿತ್ರಣವನ್ನು ಮುಖ್ಯಮಂತ್ರಿಯವರಿಗೆ ನೀಡಿ, ಇದನ್ನು ಎದುರಿಸಲು ಏನು ಮಾಡಬೇಕೆಂಬುದರ ಬಗ್ಗೆಯು ಸಲಹೆಗಳನ್ನು ನೀಡಿದ್ದಾರೆ.

ರಾಜ್ಯದ ನೂತನ ಮುಖ್ಯಕಾರ್ಯದರ್ಶಿಯಾಗಿ ರವಿಕುಮಾರ್ ಅವರು ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಇಂತಹ ಸಭೆ ನಡೆಯಿತು.

## ಸೆಬಿ : ಮುಕೇಶ್ ಅಂಬಾನಿಗೆ ದಂಡ

ನವದೆಹಲಿ, ಜ. 1 – ಈ ಹಿಂದೆ ನವೆಂಬರ್ 2007ರಲ್ಲಿ ರಿಲೈಯನ್ಸ್ ಪೆಟ್ರೋಲಿಯಂ ಷೇರುಗಳ ವ್ಯಾಪಾರವನ್ನು ತಿರುಚಿದ ಆರೋಪದ ಮೇಲೆ ರಿಲೈಯನ್ಸ್ ಇಂಡಸ್ಟ್ರೀಸ್ ಹಾಗೂ ಅದರ ಅಧ್ಯಕ್ಷ ಮುಕೇಶ್ ಅಂಬಾನಿ ಹಾಗೂ ಇನ್ನೆರಡು ಕಂಪನಿಗಳಿಗೆ ಮಾರುಕಟ್ಟೆ ನಿಯಂತ್ರಕ ಸೆಬಿ ದಂಡ ವಿಧಿಸಿದೆ.

ರಿಲೈಯನ್ಸ್ ಇಂಡಸ್ಟ್ರೀಸ್‌ಗೆ 25 ಕೋಟಿ ರೂ. ಹಾಗೂ ಮುಕೇಶ್ ಅಂಬಾನಿಗೆ 15 ಕೋಟಿ ರೂ. ದಂಡ ವಿಧಿಸಲಾಗಿದೆ. ಅಲ್ಲದೇ ನವಿ ಮುಂಬೈ ಎಸ್‌ಇಝಡ್ ಲಿಮಿಟೆಡ್‌ಗೆ 20 ಕೋಟಿ ರೂ. ಮತ್ತು ಮುಂಬೈ ಎಸ್‌ಇಝಡ್‌ಗೆ 10 ಕೋಟಿ ರೂ. ದಂಡ ವಿಧಿಸಲಾಗಿದೆ.


2007ರ ನವೆಂಬರ್‌ನಲ್ಲಿ ನಡೆದ ರಿಲೈಯನ್ಸ್ ಪೆಟ್ರೋಲಿಯಂ ಷೇರುಗಳ ಖರೀದಿ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ರಿಲೈಯನ್ಸ್ ಸದ್ಯಕ್ಕೆ ಯಾವುದೇ ಹೇಳಿಕೆ ನೀಡಿಲ್ಲ.

## ಬ್ರಿಟನ್‌ನಿಂದ ಮರಳಿದ 75 ಜನ ಇನ್ನೂ ಪತ್ತೆಯಿಲ್ಲ

ಬೆಂಗಳೂರು, ಜ. 1 – ಬ್ರಿಟನ್‌ನಿಂದ ಮರಳಿರುವ 75 ಜನರನ್ನು ಇನ್ನೂ ಪತ್ತೆ ಮಾಡಬೇಕಿದೆ ಎಂದು ಆರೋಗ್ಯ ಸಚಿವ ಕೆ. ಸುಧಾಕರ್ ತಿಳಿಸಿದ್ದಾರೆ.

ಬ್ರಿಟನ್‌ನಿಂದ ಮರಳಿದ 7 ಜನರಲ್ಲಿ ರೂಪಾಂತರಿ ಕೊರೊನಾ ವೈರಸ್ ಕಂಡು ಬಂದಿದೆ. ಇನ್ನೂ 31 ಜನರ ಜಿನೋಮ್ ಸಿಕ್ವೆನ್ಸ್ ವರದಿ ಬರಬೇಕಿದೆ ಎಂದವರು ಹೇಳಿದ್ದಾರೆ.

## ಶ್ಯಾಬನೂರಿನಲ್ಲಿ ಇಂದು ಕಾರ್ತಿಕ



ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ದಲ್ಲಿ ಇಂದು ಸಂಜೆ ಕಾರ್ತಿಕ ಮಹೋತ್ಸವ ಜರುಗಲಿದೆ ಎಂದು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ ತಿಳಿಸಿದೆ.


ಕಾಣೆಯಾಗಿದ್ದಾರೆ



55 ವರ್ಷ,

ದಿ : 20-12-2020

08192-253100, 08192-262555, 08192-272014


## ರಾಜನಹಳ್ಳಿ ಶ್ರೀಗಳ ಮೂರನೇ ಹಂತದ ಪ್ರವಾಸ ಇಂದಿನಿಂದ



ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಜರುಗಲಿರುವ 3ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಇಂದಿನಿಂದ ಇದೇ ದಿನಾಂಕ 14 ರವರೆಗೆ ರಾಜ್ಯದಲ್ಲಿ 3ನೇ ಹಂತದ ಪ್ರವಾಸ ಕೈಗೊಂಡಿದ್ದಾರೆ.

ಈಗಾಗಲೇ ದಾವಣಗೆರೆ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ್, ಯಾದಗಿರಿ, ವಿಜಯಪುರ, ಬಾಗಲಕೋಟೆ, ಗದಗ, ಕೊಪ್ಪಳ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರವಾಸ ಮುಗಿಸಿರುವ ಶ್ರೀಗಳು, 3ನೇ ಹಂತದಲ್ಲಿ ಹಾವೇರಿ, ಧಾರವಾಡ, ಬೆಳಗಾವಿ, ಉತ್ತರಕನ್ನಡ ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ, ನ್ಯಾಮತಿ, ಚನ್ನಗಿರಿ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಲಿದ್ದಾರೆ.


















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte